# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:248 • ನೋಂದಣಿ ನಂ.:KARKAN27911 • ವಿಜಯನಗರ • 27.02.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:248 • Reg.No:KARKAN27911 • VIJAYANAGARA • 27.02.2024 • Tuesday • Page:04 • Rs:2


## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

27-02-2024 – ಮಂಗಳವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ |
| ಯೋಗ | : ಶೂಲ |
| ಕರಣ | : ವಾಣಿಜ |
| ಸೂರ್ಯೋದಯ | : 06.52.04 |
| ಸೂರ್ಯಾಸ್ತ | : 18:27:40 |
| ರಾಹು | : 15:34–17:01 |
| ಯಮಘಂಡ | : 09:46–11.13 |
| ಗುಳಿಕ | : 12:40–14:07 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ: 26–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.14 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 848 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.804 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1606.3 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8384 ಕ್ಯುಸೆಕ್ |
| ಸಾಮರ್ಥ್ಯ | 30.843 ಟಿಎಂಸಿ |

# ಸಂಪಾಯಿತಲೇ ಪರಾಕ್

## ವಿಜಯನಗರ ಜಿಲ್ಲೆ ಮೈಲಾರ ಕಾರ್ಣಿಕೋತ್ಸವದಲ್ಲಿ ದೈವವಾಣಿ ನುಡಿದ ರಾಮಣ್ಣ ಗೊರವಯ್ಯ

## ರಾಜ್ಯದಲ್ಲಿ ಮಳೆ ಬೆಳೆ ಸಮೃದ್ಧಿ, ಸುಭೀಕ್ಷೆ ಸರ್ಕಾರ ಎಂದು ಭಕ್ತರ ವಿಶ್ಲೇಷಣೆ



■ **ಶಿವಕುಮಾರ ಪತ್ರಿಮಠದ**
**ಹಂಪಿ ಟೈಮ್ಸ್ ಹೂವಿನಹಡಗಲಿ**

ರಾಜ್ಯದ ಹೆಸರಾಂತ ಧಾರ್ಮಿಕ ಕ್ಷೇತ್ರ ಮೈಲಾರದಲ್ಲಿ ಮೈಲಾರಲಿಂಗೇಶ್ವರನ ಜಾತ್ರೆಯ ಅಂಗವಾಗಿ ಶನಿವಾರ ಸಂಜೆ 5:30 ಕ್ಕೆ ಗೋಧೂಳಿ ಸಮಯದಲ್ಲಿ ಕಪಿಲಮುನಿಗಳ ಪೀಠದ ಗುರುಗಳಿಂದ ದೀಕ್ಷೆ ಪಡೆದ ರಾಮಣ್ಣ ಗೊರವಯ್ಯ ಕ್ಷೇತ್ರದ ಧರ್ಮಾಧಿಕಾರಿಗಳಾದ ವೆಂಕಪ್ಪಯ್ಯ ಒಡೆಯರ್ ಅವರ ಆರ್ಶಿವಾದ ಪಡೆದು, ಸುಮಾರು 18 ಅಡಿ ಉದ್ದದ ಬಿಲ್ಲನ್ನು ಏರಿ, ನೆರೆದ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸದ್ದಲೇ ಎಂದ ಮರುಕ್ಷಣವೇ ಸಂಪಾಯಿತಲೇ ಪರಾಕ್ ಎಂಬ ದೈವವಾಣಿ ನುಡಿದರು.

ದೈವವಾಣಿಯನ್ನು ನೆರೆದಿದ್ದ ಜನರು ಕೇಳುತ್ತಿಂದತೆಯೇ ಎಲ್ಲರ ಮನದಲ್ಲಿ ಸಂತೋಷದಿಂದ ಕುಣಿದಾಡಿದರು. ಸವಾರಿ ಬಂಡಿ ಹೂಡಿ ಹೊಸ ಬಟ್ಟೆ ತೊಟ್ಟು ಎತ್ತುಗಳ ಕೊರಳಿಗೆ ಗೆಜ್ಜೆ ಕಟ್ಟಿ ಜೂಲವನ್ನು ಹಾಕಿ ಗಲ್ ಗಲ್ ಶಬ್ಧ ಮಾಡುತ್ತಾ ಖುಷಿಯಿಂದ ಜಾತ್ರೆಗೆ ಬಂದ ಭಕ್ತರು ದೈವವಾಣಿಯನ್ನು ಕೇಳಿ ಸಂಭ್ರಮ ಸಡಗರದಿಂದ ಕೂಗುತ್ತಾ ಕೇಕೇ ಹಾಕುತ್ತಾ ಮರಳಿದರು.

ಏಕೆಂದರೆ ಪ್ರತಿ ವರ್ಷ ನುಡಿಯುವ ದೇವವಾಣಿಯಲ್ಲಿ ಆ ವರ್ಷದ ಮಳೆ ಬೆಳೆ ರಾಜಕೀಯ ಭವಿಷ್ಯ ಅಡಕವಾಗಿರುತ್ತದೆ.

ಈ ಭವಿಷ್ಯವಾಣಿಯಂತೆ ರಾಜ್ಯಕ್ಕೆ ಸಂಮೃದ್ಧಿ ಮಳೆ ಬೆಳೆ ಆಗಿ ಇದುವರೆಗೂ ರೈತಬಾಂಧವರು ಎದುರಿಸಿದ ಸಂಕಷ್ಟಗಳೆಲ್ಲಾ ದೂರಾಗಲಿವೆ ರಾಜ್ಯ ರಾಜಕೀಯದಲ್ಲಿ ಯಾವ ಗೊಂದಲಗಳಿಲ್ಲದೆ ಸರ್ಕಾರ ಸುಭೀಕ್ಷೆಯಿಂದ ನಡೆಯುವುದು ಎಂದು ಭಕ್ತರು ಪರಸ್ಪರ ವಿಶ್ಲೇಷಣೆ ಮಾಡಿದರು.

ಗೊರವಯ್ಯ ನುಡಿದ ಕಾರ್ಣಿಕ ಬಗ್ಗೆ ದೇವಸ್ಥಾನದ ಧರ್ಮದರ್ಶಿ ಅಸಮಧಾನ ವ್ಯಕ್ತಪಡಿಸಿದ್ದಾರೆ. ಶಾಸಕ ಕೃಷ್ಣಾನಾಯ್ಕ್, ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದ ವಂಶಪಾರಂಪರ್ಯ ಧರ್ಮಕರ್ತರಾದ ಶ್ರೀಗುರು ವೆಂಕಪ್ಪಯ್ಯ ಒಡೆಯರ್, ಕಾಗಿನೆಲೆ ಪೂಜ್ಯರಾದ ನಿರಂಜನನಂದ ಸ್ವಾಮಿಗಳು, ಚನ್ನಬಸವೇಶ್ವರ ಸ್ವಾಮಿಗಳು, ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ್, ಐಜಿಪಿ ಬಿ.ಎಸ್.ಲೋಕೇಶ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿಗಳಾದ ಶ್ರೀಹರಿ ಬಾಬು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆಯ ಆಯುಕ್ತರಾದ ಹೆಚ್.ಗಂಗಾಧರಪ್ಪ, ಮೈಲಾರ ಲಿಂಗೇಶ್ವರಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ.ಕೃಷ್ಣಪ್ಪ, ಜೇಸ್ಕಾಂ ಅಧಿಕಾರಿ, ಗಣ್ಯರು ಸೇರಿದಂತೆ ಲಕಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.

**ಫೆ.27ರಂದು ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯು ಹೆಗ್ಗಪ್ಪನ ಮರಡಿಗೆ ಉತ್ಸವ ಹೊರಡುವುದು. ಸಂಜೆ 4.30ಕ್ಕೆ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಗುರು ಪಾರಂಪರ್ಯ ಶ್ರೀ ಗುರುಗಳಿಂದ ಭಂಡಾರ ಆಶೀರ್ವಾದ, ಕಂಚಿವೀರರಿಂದ ಪವಾಡ ಹಾಗೂ ಗೊರವಯ್ಯರವರಿಂದ ಸರಪಳಿ ಪವಾಡ ನಡೆಯಲಿದೆ.**









## ಶ್ರೀಶೈಲ ದೇವಸ್ಥಾನ ದರ್ಶನಕ್ಕೆ ವಿಶೇಷ ವ್ಯವಸ್ಥೆ

**ಹಂಪಿ ಟೈಮ್ಸ್ ಬಳ್ಳಾರಿ**

ಶ್ರೀಶೈಲ ಮಹಾಕ್ಷೇತ್ರದಲ್ಲಿ ಮಾ.01 ರಿಂದ 11 ರ ವರೆಗೆ ಮಹಾಶಿವರಾತ್ರಿ ಬ್ರಹೋತ್ಸವ ಅಂಗವಾಗಿ ಸ್ವಾಮಿಯ ದರ್ಶನಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಉಪಕಲೆಕ್ಟರ್ ಡಿ.ಪೆದ್ದಿರಾಜು ಅವರು ತಿಳಿಸಿದ್ದಾರೆ.

ಬ್ರಹೋತ್ಸವದಲ್ಲಿ ಭಕ್ತರ ದಟ್ಟಣೆಯಿಂದ ಮಾ.01 ರಿಂದ 11 ರ ವರೆಗೆ ಶ್ರೀ ಸ್ವಾಮಿಯವರ ಅಲಂಕಾರ ದರ್ಶನ ಮಾತ್ರ ಕಲ್ಪಿಸಲಾಗುತ್ತದೆ. ಭಕ್ತರಿಗಾಗಿ ಉಚಿತ ದರ್ಶನವಲ್ಲದೆ ಶೀಘ್ರ ದರ್ಶನ ಮತ್ತು ಅತಿ ಶೀಘ್ರ ದರ್ಶನಗಳಿಗೆ ಕೂಡ ಅವಕಾಶ ಕಲ್ಪಿಸಲಾಗಿದೆ. ಶೀಘ್ರ ದರ್ಶನಕ್ಕಾಗಿ ರೂ.200 ಮತ್ತು ಅತಿ ಶೀಘ್ರ ದರ್ಶನಕ್ಕಾಗಿ ರೂ.500 ಗಳನ್ನು ಪಾವತಿಸಬೇಕು. ಈ ಟಿಕೆಟ್‌ಗಳನ್ನು ಆನ್‌ಲೈನ್ ವಿಧಾನದಲ್ಲಿ ದೇವಸ್ಥಾನದ ವೆಬ್‌ಸೈಟ್ www.srisailadevasthanam.org ಮೂಲಕ ಮುಂಚಿತವಾಗಿ ಹೊಂದಬಹುದು. ಬ್ರಹೋತ್ಸವಗಳ ಪ್ರಾರಂಭದಲ್ಲಿ ಐದು ದಿವಸಗಳು ಮಾ.01 ರಿಂದ 05 ರ ವರೆಗೆ ಜ್ಯೋತಿರ್ಮುಡಿ (ಇರುಮುಡಿ) ಇರುವ ಶಿವದೀಕ್ಷಾ ಭಕ್ತರಿಗೆ ಹಂತ ಹಂತವಾಗಿ ನಿರ್ದಿಷ್ಟ ಸಮಯಗಳಲ್ಲಿ ಮಾತ್ರವೇ ಸ್ವಾಮಿಯವರ ಉಚಿತ ಸ್ಪರ್ಶ ದರ್ಶನ ಕಲ್ಪಿಸಲಾಗುತ್ತದೆ. ಮಾ.05 ರಂದು ರಾತ್ರಿ 7:30 ರಿಂದ ಮಾ.11 ರಾತ್ರಿಯವರೆಗೆ ಭಕ್ತರೆಲ್ಲರಿಗೂ ಶ್ರೀ ಸ್ವಾಮಿಯವರ ಅಲಂಕಾರ ದರ್ಶನಕ್ಕೆ ಮಾತ್ರವೇ ಅವಕಾಶ ನೀಡಲಾಗಿದೆ ಮತ್ತು ಮಾ.01 ರಿಂದ 11 ರ ವರೆಗೆ ಎಲ್ಲಾ ಅರ್ಜಿತ (ಸಂಚಿತ) ಸೇವೆಗಳು ಸಂಪೂರ್ಣವಾಗಿ ನಿಲ್ಲಿಸಲಾಗಿದೆ.

## ಫೆ.29ರಿಂದ ಎರಡು ದಿನಗಳ ಕಾಲ ರಸ್ತೆ ಸಂಚಾರ ಸಮೀಕ್ಷೆ


■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯಿಂದ ಪ್ರತಿವರ್ಷಕ್ಕೊಮ್ಮೆ ಎರಡು ದಿನಗಳವರೆಗೆ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ವಾಹನ ಸಂಚಾರ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಎರಡು ದಿನಗಳ ರಸ್ತೆ ಸಂಚಾರ ಸಮೀಕ್ಷೆಯು ಫೆ.29 ರಿಂದ ಮಾರ್ಚ 2ರವರೆಗೆ ಬೆಳಿಗ್ಗೆ 6 ಗಂಟೆಯವರೆಗೆ ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ರಸ್ತೆ ಸಂಚಾರ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಇದಕ್ಕಾಗಿ ರಸ್ತೆಗಳ ಮೇಲೆ ಸಮೀಕ್ಷೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಸಮೀಕ್ಷೆ ಕೇಂದ್ರಗಳಿದ್ದಲ್ಲಿ ವಾಹನ ರಸ್ತೆ ಸಂಚಾರ ಸಮೀಕ್ಷೆ ಕೇಂದ್ರವಿದೆ. ತಮ್ಮ ವಾಹನಗಳನ್ನು ನಿಧಾನವಾಗಿ ಚಲಿಸಿ ಎಂದು ಸೂಚನಾ ಫಲಕಗಳನ್ನು ಸಹ ತೂಗುಬಿಟ್ಟಿರುತ್ತಾರೆ. ಎಲ್ಲಾ ವಾಹನ ಚಾಲಕರು ತಮ್ಮ ವಾಹನಗಳನ್ನು ನಿಧಾನವಾಗಿ ಸಾಗಿಸಿಕೊಂಡು ಮುಂದೆ ಸಾಗಿಸಬೇಕು ಎಂದು ಲೋಕೋಪಯೋಗಿ ಇಲಾಖೆಯ ಅಧೀಕೃತ ಇಂಜಿನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**



ಜೆಸ್ಕಾಂನ ಹೊಸಪೇಟೆ ನಗರದ ಕಮಲಾಪುರ ವಿಭಾಗದ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವ ಕಾರಣ ಫೆ.27 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಅಂದು ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ ಗ್ರಾಮ ಪಂಚಾಯಿತಿ, ಸೀತರಾಮ ತಾಂಡ ಗ್ರಾಮ ಪಂಚಾಯಿತಿ, ಮಲಪನಗುಡಿ ಗ್ರಾಮ ಪಂಚಾಯಿತಿ, ಹಂಪಿ ಗ್ರಾಮ ಪಂಚಾಯಿತಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿ, ಗಾದಿಗನೂರು ಗ್ರಾಮ ಪಂಚಾಯಿತಿ ಮತ್ತು ಬೈಲುವದ್ದಿಗೇರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು ಎಂದು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ರೋಟರಿ ಐಸಿಯು ಅಂಬುಲೆನ್ಸ್ ಲೋಕಾರ್ಪಣೆ

## ವಿ.ರಾಮಿರೆಡ್ಡಿ ರೋಟರಿ ಐಸಿಯು ಅಂಬುಲೆನ್ಸ್ ಸಹ ಅಧ್ಯಕ್ಷ ಸೈಯದ್ ನಾಜಿಮುದ್ದೀನ್ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಜನರಿಗೆ ತುರ್ತು ಸಂದರ್ಭದಲ್ಲಿ ಅತ್ಯವಶ್ಯವಾದ ಐಸಿಯು ಅಂಬುಲೆನ್ಸ್ ಕೊರತೆ ನೀಗಿಸುವುದರೊಂದಿಗೆ ಕೈಗೆಟುಕುವ ದರದಲ್ಲಿ ಸೇವೆ ನೀಡಲು ರೋಟರಿ ಕ್ಲಬ್ ಮತ್ತೊಂದು ದಿಟ್ಟೆ ಹೆಜ್ಜೆ ಇಟ್ಟಿದೆ ಎಂದು ವಿ.ರಾಮಿರೆಡ್ಡಿ ರೋಟರಿ ಐಸಿಯು ಅಂಬುಲೆನ್ಸ್ ಸಹ ಅಧ್ಯಕ್ಷ ಸೈಯದ್ ನಾಜಿಮುದ್ದೀನ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರೋಟರಿ ಕ್ಲಬ್ ಜನರ ಅಗತ್ಯತೆಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ ಸಾಕಾರಗೊಳಿಸುತ್ತಾ ಬಂದಿದೆ. ಇದೂವರೆಗೂ ಐಸಿಯು ಅಂಬೆಲೆನ್ಸ್‌ಗಳಿಗಾಗಿ ನೆರೆ ಜಿಲ್ಲೆಗಳನ್ನು ಅವಲಂಬಿಸಬೇಕಿತ್ತು. ಸಮಯದ ವಿಳಂಭ ಹಾಗೂ ಸಕಾಲದೊಳಗೆ ಸೇವೆ ದೊರೆಯದ್ದರಿಂದ ಅನೇಕರು ಉಸಿರುಚೆಲ್ಲಿದ್ದಾರೆ. ಸಕಾಲಕ್ಕೆ ಅಂಬುಲೆನ್ಸ್ ದೊರೆತೆ ಜೀವ ಉಳಿಯಬಹುದು ಎಂಬುದು ಮತ್ತು ಜನರ ಅಗತ್ಯತೆಗಳನ್ನು ಅರಿತು ಜಿಲ್ಲಾ ಕೇಂದ್ರದಲ್ಲಿ ಸಂಪೂರ್ಣ ಹವಾ ನಿಯಂತ್ರಿತ, ತಜ್ಞ, ತಂತ್ರಜ್ಞ ಸಿಬ್ಬಂದಿಯೊಂದಿಗೆ ಐಸಿಯು ಅಂಬುಲೆನ್ಸ್ ಸೇವೆ ಆರಂಭಿಸಲಾಗುತ್ತಿದೆ. ರೋಟರಿಯಿಂದ ಆರಂಭಗೊಂಡ ಪ್ರತಿ ಸೇವೆಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಇದೀಗ ಮತ್ತೊಂದು ಸೇವೆ ಸೇರ್ಪಡೆಗೊಂಡು ಜನರ ಪ್ರಾಣ ರಕ್ಷಣೆಗೆ ಮುಂದಾಗಿದೆ. ತುರ್ತು ಸಂದರ್ಭದಲ್ಲಿ ರೋಟರಿ ಸಂಸ್ಥೆಯ ಐಸಿಯು ಅಂಬುಲೆನ್ಸ್ ಸೇವೆ ಪಡೆಯಬಹುದು ಎಂದು ತಿಳಿಸಿದರು.

ಫೆ.27 ರಂದು ಬೆಳಿಗ್ಗೆ 10.30ಕ್ಕೆ ನಗರದ ರೋಟರಿ ಕ್ಲಬ್‌ನಲ್ಲಿ ಅಂಬುಲೆನ್ಸ್ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೋಟೇರಿಯನ್ ಜಿಲ್ಲಾ ಗವರ್ನರ್ ಮನಿಕ್ ಪವರ್, ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಡಿಎಚ್‌ಓ ಶಂಕರ್ ನಾಯ್ಕ, ದಾನಿ ತಿರುಪತಿ ನಾಯ್ಡು ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ವಿ.ರಾಮಿರೆಡ್ಡಿ ರೋಟರಿ ಐಸಿಯು ಅಂಬುಲೆನ್ಸ್ ಕಾರ್ಯದರ್ಶಿ ರಾಜೇಶ್ ಕೋರಿಶೆಟ್ಟಿ ರೋಟರಿ ಕ್ಲಬ್ ಸೇವೆ ಕುರಿತು ವಿವರಿಸಿದರು. ರೋಟರಿ ಅಧ್ಯಕ್ಷ ಆರ್.ಸತ್ಯನಾರಾಯಣ, ಕಾರ್ಯದರ್ಶಿ ಕೆ.ಎಸ್.ದಾದಾಪೀರ, ರೋಟರಿಯನ್ ವಿಜಯಸಿಂಧಗಿ ಸೇರಿದಂತೆ ಇತರರು ಇದ್ದರು.




## ವಚನ ಅರಿವು

### ಅನ್ನವೇ ಶಿವ

**ದೇಹಾರವ ಮಾಡುವಣ್ಣಗಳಿರಾ,**
**ಒಂದು ತುತ್ತು ಆಹಾರವನಿಕ್ಕಿರೆ.**
**ದೇಹಾರಕ್ಕೆ ಆಹಾರವೆ ನಿಚ್ಚಣಿಕೆ,**
**ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ,**
**ಆ ಹರನಿಲ್ಲೆಂದನಂಬಿಗ ಚೌಡಯ್ಯ.**
**– ಅಂಬಿಗರ ಚೌಡಯ್ಯ**

ನಾವು ದೇವರನ್ನು ಒಲಿಸಿಕೊಳ್ಳಬೇಕೆಂದು, ನಮಗೆ ಒಳ್ಳೆಯದಾಗಲೆಂದು ಮೂರ್ತಿಗಳಿಗೆ ಬಗೆ ಬಗೆಯ ಅರ್ಚನೆ, ಅಭಿಷೇಕ, ಪೂಜೆಗಳನ್ನು ಮಾಡುತ್ತಿರುತ್ತೇವೆ ಅಥವ ಮಾಡಿಸುತ್ತೇವೆ. ಆದರೆ ಹಸಿದು ಬಂದ ಅಸಹಾಯಕರಿಗೆ ಒಂದು ತುತ್ತು ಅನ್ನ ನೀಡಲು ಹಿಂಜರಿಯುತ್ತೇವೆ. ಹೀಗೆ ಪೂಜೆ ಮಾಡುವವರೇ ಮೊದಲು ಹಸಿದವರಿಗೆ ಒಂದು ತುತ್ತು ಅನ್ನ ನೀಡಿರಿ, ಅದೇ ನೀವು ದೇವರಿಗೆ ಮಾಡುವ ಪೂಜೆಯಾಗುತ್ತದೆ. ನಿಮ್ಮ ಪುಣ್ಯಕ್ಕೆ ಮೊದಲ ಮೆಟ್ಟಿಲಾಗುತ್ತದೆ. ಇಲ್ಲದಿದ್ದರೆ ಅದೊಂದು ಬರಿ ಆಚರಣೆಯಾಗುತ್ತದೆ ಅಷ್ಟೆ. ಹಸಿದವರಿಗೆ, ಅಸಹಾಯಕರಿಗೆ, ಬಡವರಿಗೆ ಒಂದು ತುತ್ತು ಅನ್ನವನಿಕ್ಕದೆ ಬರಿ ಪೂಜೆ, ಪುನಸ್ಕಾರಗಳಿಂದ ದೇವರು ಒಲಿಯುವುದಿಲ್ಲ. ಹಾಗಾಗಿ ಅನ್ನವೇ ಪರಬ್ರಹ್ಮ. ಹಸಿದವರಿಗೆ ಅನ್ನ ನೀಡುವುದೆ ದೇವರ ಪೂಜೆ ಎನ್ನುತ್ತಾನೆ ಶರಣ ಅಂಬಿಗರ ಚೌಡಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಫೆ.28 ರಂದು ಕೃಷಿ-ಡ್ರೋನ್ ತಂತ್ರಜ್ಞಾನ ಪ್ರದರ್ಶನ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಭಾರತೀಯ ಮಣ್ಣು ಮತ್ತು ಜಲ ಸಂರಕ್ಷಣ ಸಂಸ್ಥೆ, ಸಂಶೋಧನಾ ಕೇಂದ್ರ, ಬಳ್ಳಾರಿ ಇವರ ವತಿಯಿಂದ ಕೃಷಿ–ಡ್ರೋನ್ ತಂತ್ರಜ್ಞಾನ ಪ್ರದರ್ಶನ ಕಾರ್ಯಕ್ರಮವನ್ನು ಫೆ.28 ರಂದು ಬಳ್ಳಾರಿ ತಾಲ್ಲೂಕಿನ ಬೆಳಗಲ್ ತಾಂಡಾ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಅಗ್ರಿ–ಡ್ರೋನ್ ಯೋಜನೆಯಡಿಯಲ್ಲಿ, ICAR–ಕೃಷಿ ತಂತ್ರಜ್ಞಾನ ಅನ್ವಯಿಕ ಸಂಶೋಧನಾ ಸಂಸ್ಥೆ (ಂಖಿಂಖಿ), ಲುಧಿಯಾನ ಇವರ ಧನಸಹಾಯದೊಂದಿಗೆ ಆಯೋಜಿಸಲಾಗಿದೆ.

ಮಾಹಿತಿಗಾಗಿ ಸಮನ್ವಯ ತಂಡ: ಡಾ.ಎಂ.ಎನ್. ರಮೇಶ, ಹಿರಿಯ ವಿಜ್ಞಾನಿ (ಅರಣ್ಯ), ಮೊ: 9630437467. ಗೌರವ್ ಭಾಟಿ, ತಂತ್ರಜ್ಞ, ಮೊ: 91489 51990. ವೃಷಭೇಂದ್ರಪ್ಪ, ತಂತ್ರಜ್ಞ ಇವರ ಮೊ:7899153251, ರಾಜ್ಪಾಲ್, ತಂತ್ರಜ್ಞ ಇವರ ಮೊ:80532 59090. ಸಂಪರ್ಕದ ವಿವರ: ಡಾ.ಬಿ.ಕೃಷ್ಣರಾವ್, ಮುಖ್ಯಸ್ಥರು, ಇವರ ಮೊ:9574715074. ಡಾ.ಎಂ.ಎನ್.ರಮೇಶ, ಹಿರಿಯ ವಿಜ್ಞಾನಿ (ಅರಣ್ಯ), ಇವರ ಮೊ:9630437467 ಗೆ ಸಂಪರ್ಕಿಸಬಹುದು ಎಂದು ಬಳ್ಳಾರಿಯ ಭಾರತೀಯ ಮಣ್ಣು ಮತ್ತು ಜಲ ಸಂರಕ್ಷಣ ಸಂಸ್ಥೆ, ಸಂಶೋಧನಾ ಕೇಂದ್ರದ ಪ್ರಭಾರಿ ಮುಖ್ಯಸ್ಥರಾದ ಬಿ.ಎಸ್.ನಾಯ್ಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಭವಿಷ್ಯದ ಭರವಸೆ ಮಕ್ಕಳಲ್ವೆ?

ದೈವ ಸೃಷ್ಟಿಯ ಅದ್ಭುತ! ಮಾನವ ಕುಲದ ಮಧುರ ಕುರುಹು ಎಂದರೆ ಮಗುವಲ್ಲವೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳೇ ಭವಿಷ್ಯದ ಮಾನವ ಕುಲದ ಮುನ್ನುಡಿ ಎಂದರೆ ತಪ್ಪಾಗಲಾರದು. ಅಂತಹ ಅನೂಹ್ಯವಾದ ಮಾನವ ಸಮಾಜದ ಸೃಷ್ಟಿಯು ಸತ್ವಯುತವಾಗಬೇಕಾದರೆ ಆ ಮಗುವಿನ ಬಾಲ್ಯವನ್ನು ಅತ್ಯಂತ ಸಂಸ್ಕಾರಯುತವಾಗಿ, ಜವಾಬ್ದಾರಿಯುತವಾಗಿ, ಸರಿಯಾದ ಮಾರ್ಗದರ್ಶನದಲ್ಲಿ ರೂಪಿಸುವ ಜವಾಬ್ದಾರಿ, ಹೊಣೆಗಾರಿಕೆ ಆ ಮಗುವಿನ ಪೋಷಕರು ಹಾಗೂ ಶಿಕ್ಷಕರು ಹಾಗು ಸಮಾಜದ ಮೇಲೆ ಇರುತ್ತದೆ.

ಪ್ರತಿಯೊಂದು ಮಗುವೂ ವಿಭಿನ್ನ, ಪ್ರತಿ ಮಗುವಿನಲ್ಲಿ ಭಿನ್ನ ಭಿನ್ನ ಅಭಿರುಚಿ, ಅಭಿಪ್ರಾಯ ಮತ್ತು ಅನಿಸಿಕೆಗಳು ಇರುತ್ತವೆ. ಹಾಗೆಯೇ ಪ್ರತಿ ಮಗುವಿನಲ್ಲೂ ಸಹ ಅಗಾಧವಾದ ಪ್ರತಿಭೆಯನ್ನು ಕಾಣಬಹುದಾಗಿದೆ. ಇದು ಪ್ರತಿ ಮಗುವೂ ತನ್ನ ಹುಟ್ಟಿನಿಂದಲೇ ಪಡೆದುಕೊಂಡರು ತನ್ನ ಬೆಳವಣಿಗೆಯ ಹಂತದಲ್ಲಿ ಇನ್ನಷ್ಟು ಮತ್ತಷ್ಟುನ್ನು ಬೆಳೆಸಿಕೊಂಡು ತನ್ನಲ್ಲಿ ಇರಿಸಿಕೊಂಡು ಮುಂದೆ ಬೆಳೆಸಿಕೊಂಡು ಹೋಗುತ್ತದೆ. ಅದನ್ನು ಸರಿಯಾದ ರೀತಿಯಲ್ಲಿ ಗುರುತಿಸಿ ಪ್ರೋತ್ಸಾಹಿಸುವ ಸೂಕ್ತ ವ್ಯಕ್ತಿ ಅದು ಪಾಲಕರಾಗಿರಬಹುದು, ಶಿಕ್ಷಕನಾಗಿರಬಹುದು ಅಥವಾ ಗುರುವಾಗಿರಲೂಬಹುದು. ಅಂತಹ ವ್ಯಕ್ತಿ ಸಿಕ್ಕಾಗ ಮಾತ್ರ ಆ ಮಕ್ಕಳ ಪ್ರತಿಭೆ ಅನಾವರಣಗೊಳ್ಳುತ್ತದೆ. ಇಲ್ಲವಾದಲ್ಲಿ ಅದು ಅಲ್ಲೇ ಕಮರಿಹೋಗುತ್ತದೆ.

ಒಂದು ವಿಷಯ ನಾವಿಲ್ಲಿ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಅದೇನೆಂದರೆ ಭವಿಷ್ಯದಲ್ಲಿ ನಮ್ಮ ಈ ಮನುಕುಲದ ಭವಿಷ್ಯ ಏನಾಗಬೇಕು ಎಂಬುವುದು ಮತ್ತು ಅದರ ಪರಿಣಾಮ ಹೇಗಿರಬೇಕು ಎನ್ನುವುದು, ಇಂದು ನಾವು ನಮ್ಮ ಮಕ್ಕಳನ್ನು ಯಾವ ರೀತಿ ಬೆಳಸುತಿದ್ದೇವೆ ಮತ್ತು ನಾವು ಮಕ್ಕಳನ್ನು ಬೆಳೆಸುವ ಹಂತದಲ್ಲಿನ ನಮ್ಮ ಅಗತ್ಯ ಮತ್ತು ಅನಿವಾರ್ಯಗಳು ಹಾಗು ಅವುಗಳಿಂದ ಭವಿಷ್ಯತ್ತಿನಲ್ಲಿ ನಾವು ಬಯಸುತ್ತಿರುವ ಪೈತಾಂಶದ ಆಧಾರದ ಮೇಲೆ ಅದು ಅವಲಂಬಿತವಾಗಿದೆ. ಹಾಗಾಗಿ ನಾವೆಲ್ಲರೂ ಸೇರಿ ನಮ್ಮ ಮಕ್ಕಳ ಉತ್ತಮ ಭವಿಷ್ಯ ರೂಪಿಸುವಲ್ಲಿ ಅವರಿಗೆ ಮೌಲ್ಯಯುತವಾದಂತಹ ಬದುಕನ್ನು ಕಟ್ಟಿಕೊಡಬೇಕಾದಲ್ಲಿ ಪಾಲಕರಾದ ನಮ್ಮೆಲ್ಲರ ಜವಾಬ್ದಾರಿ ಇಂದಿನ ಅತೀ ಅಗತ್ಯ ಮತ್ತು ಅನಿವಾರ್ಯ ವಾಗಿದೆ.

ಅದಕ್ಕಾಗಿ ಪಾಲಕರಾದ ನಾವು ಮೊದಲು ಮೌಲ್ಯಯುತವಾದ ಮತ್ತು ಮಾದರಿಯಾದ ಜೀವನವನ್ನು ನೆಡಬೇಕು. ಆಗ ಮಾತ್ರ ನಮ್ಮ ಮಕ್ಕಳು ನಮ್ಮನ್ನು ಅನುಸರಿಸುತ್ತಾರೆ. ಹಗೆಯೇ ನಾವು ಸಹ ಅವರಿಗೆ ಅಗತ್ಯ ಮಾರ್ಗದರ್ಶನ ಮಾಡಬೇಕು. ಒಂದು ವೇಳೆ ನಾವೇ ಈ ಆದರ್ಶಪ್ರಾಯವಾದ ದಾರಿಯನ್ನು ಬಿಟ್ಟಿದ್ದೇ ಆದರೆ ನಮ್ಮ ಮಕ್ಕಳ ಭವಿಷ್ಯದ ಗತಿ ಏನು? ಎನ್ನುವ ಅಪಾಯದ ಅರಿವು ಪಾಲಕರಾದ ನಮ್ಮಲ್ಲಿ ಯಾವತ್ತೂ ಇದ್ದೇ ಇರಬೇಕು.

"ಮಕ್ಕಳ ಶಾಲೆ ಮನೆಯಲ್ಲೇ ಎನ್ನುವುದಕ್ಕೆ" ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರು ಎನ್ನುವ ಹಲವಾರು ವ್ಯಾಖ್ಯೆಗಳು ನಮಗೆ ತೋರಿಸುವಂತಹ ಕಠಿಣವಾದ ಸತ್ಯ ಏನೆಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಮೇಲಿನ ಈ ಎಲ್ಲಾ ಮಾತಿನಂತೆ ಮಕ್ಕಳಿಗೆ ಮನೆಯೇ ಮೊದಲ ಪಾಟ ಶಾಲೆ, ಅಲ್ಲಿರುವ ಅಪ್ಪ, ಅಮ್ಮ, ಅಜ್ಜ, ಅಜ್ಜಿ ಅಣ್ಣ ತಮ್ಮಂದಿರೇ ಅವರ ಸಹಪಾಠಿಗಳು ಅಂತಹ ವಾತಾವರಣದಲ್ಲಿ ಅಲ್ಲಿ ಕಲಿಯುವ ಮಕ್ಕಳ ಬಾಲ್ಯದ ಅನುಬವಗಳೇ ಅವರ ಮೇರು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಇಲ್ಲಿನ ಕೊರತೆಗಳು ಒಮ್ಮೊಮ್ಮೆ ಮಗುವನ್ನು ಹಾದಿ ತಪ್ಪಿಸುವ ಅಪಾಯವಿದೆ. ಹಾಗಾಗಿ ಪ್ರತಿಯೊಬ್ಬರೂ ಆ ಕೊರತೆಯನ್ನು ನಿವಾರಿಸಲು, ಮಕ್ಕಳ ಅವರ ಗುರಿಯನ್ನು ತಲುಪಲು ಅಗತ್ಯವಾದ ಗತಿಯನ್ನು ಅವಲೋಕಿಸಿ ಅದಕ್ಕೆ ಸೂಕ್ತವಾದ ಮಾರ್ಗದರ್ಶನ ಮಾಡಬೇಕು. ಹೆತ್ತವರು, ಪೋಶಕರು, ನೆರೆಹೊರೆಯವರು, ಸಮಾಜದ ಪ್ರತಿಯೊಂದು ಹಂತದಲ್ಲೂ ಮಕ್ಕಳನ್ನು ತರಬೇತಿಗೊಳಿಸಿದಾಗ ಮಾತ್ರ ನಮ್ಮ ಮಕ್ಕಳ ಬವಿಷ್ಯ ಉಜ್ವಲವಾಗಿರುತ್ತದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಇದಕ್ಕಾಗಿ ಪಾಲಕರು, ಶಿಕ್ಷಕರು ಮತ್ತು ಸಮಾಜವು ಮಾಡಲೇಬೇಕಾದ ಆದ್ಯ ಮತ್ತು ಅಗ್ರ ಜವಾಬ್ದಾರಿಗಳು ಎಂದರೆ:

1. ಸ್ನೇಹಮಯವಾದ ಶಾಲಾ ಪರಿಸರ ಮತ್ತು ಆಹ್ಲಾದಕರವಾದ, ಆಕರ್ಷಣೀಯವಾದ ವಾತಾವರಣ.

ಹೌದು, ಮಕ್ಕಳಲ್ಲಿ ಆ ಒಂದು ಆಪ್ತ ವಾತಾವರಣವನ್ನು ಶಾಲಾ ಹಂತದಲ್ಲಿ ಮಾಡಿದ್ದೇ ಆದರೆ ಮಕ್ಕಳು ಸಮಾಜಮುಖಿಯಾದ ತಮ್ಮ ವ್ಯಕ್ತಿತ್ವವನ್ನು ಇನ್ನೊಷ್ಟು ಉತ್ತಮ ಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಮಾತ್ರ ಮಗು ಆಸಕ್ತಿಯಿಂದ ಕಲಿಕೆಯಲ್ಲಿ ತೊಡಗುತ್ತದೆ. ಮಕ್ಕಳು ತರಗತಿಯ ಚಟುವಟಿಕೆಗಳಲ್ಲಿ ಸ್ವಾಬಾವಿಕವಾಗಿ ಮತ್ತು ಸ್ವಚ್ಛಂದವಾಗಿ ಕಲಿಯುವಂತಹ ವಾತಾವರಣ ಕಲ್ಪಿಸಿ ಕೊಡಬೇಕಾದ ಹೊಣೆಗಾರಿಕೆ ಶಿಕ್ಶಕರು ಹಾಗೂ ಸಂಬಂದಿತ ವ್ಯವಸ್ತೆಯ ಮೇಲೆ ಇದೆ.

2. ಅಮ್ಮನಂತಹ ಆಪ್ತ ಮತ್ತು ಸುರಕ್ಷತೆಯ ಆವಾಸಸ್ಥಾನವಾಗಬೇಕು ನಮ್ಮ ಮನೆ:

ಇದರಲ್ಲಿ ಅಂತಹದ್ದೇನು ವಿಶೇಷ ಎನ್ನಬೇಡಿ, ಅಮ್ಮನಂತೆ ಮನೆಯ ಉಳಿದೆಲ್ಲ ಸದಸ್ಯರೂ ಮಗುವಿನಲ್ಲಿ ಅಮ್ಮನ ರೀತಿಯ ಆಪ್ತತೆ ಮತ್ತು ಬೆಚ್ಚಗಿನ ಅನುಭವದ ಭದ್ರತೆಯನ್ನು ಕಲ್ಪಿಸಬೇಕು, ಆಗ ಮಾತ್ರ ಮಗು ಬಯದ ವಾತಾವರಣದಿಂದ ಮುಕ್ತತೆಯನ್ನು, ಅಸುರಕ್ಷತೆಯಿಂದ ಸುರಕ್ಷತೆಯನ್ನು ಅನುಭವಿಸುತ್ತದೆ, ಅತಿಯಾದ ಶಿಸ್ತು ಅವರ ಮನಸನ್ನು ಗಾಸಿಗೊಳಿಸಿದರೆ ಆ ಮಗು ಕಂಡಿತ ಉತ್ತಮ ವ್ಯಕ್ತಿ ಆಗಲ್ಲ. ಆದ್ದರಿಂದ ಇಲ್ಲಿ ಯಾರೂ ಯಾವ ಕಾರಣಕ್ಕೂ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳದೆ ತುಂಬಾ ಶ್ರದ್ದೆಯಿಂದ ನಿಬಾಯಿಸಬೇಕು. ಮಕ್ಕಳ ಬಾಲ್ಯ ಅರಳಬೇಕೇ ಹೊರತು ಕೆರಳಬಾರದು, ಅವರು ಕೊರಗಬಾರದು. ಆ ನಿಟ್ಟಿನಲ್ಲಿ ಸೂಕ್ತ ವ್ಯವಸ್ತೆಯ ಮೂಲಕ ಮಕ್ಕಳ ಬವಿಷ್ಯವನ್ನು ಖಾತ್ರಿಪಡಿಸಬೇಕು.

3. ಮಕ್ಕಳಲ್ಲಿ ಯಾವುದೇ ಕಾರಣಕ್ಕೂ ತಾರತಮ್ಯ ಮಾಡಬಾರದು:

ಬಾಲ್ಯದಲ್ಲಿ ಮಕ್ಕಳಿಗೆ ಯಾವುದೇ ಕಾರಣಕ್ಕೂ ತಾರತಮ್ಯ ಮಾಡಬಾರದು. ಅದು ಹೆಣ್ಣಿರಲಿ, ಗಂಡಿರಲಿ, ಅಣ್ಣನಿರಲಿ ತಮ್ಮನೇ ಆಗಲಿ, ಅಕ್ಕ ತಂಗಿಯರಾಗಲಿ. ಮಗುವಿನ ಬಾಲ್ಯವನ್ನು ಕಸಿದುಕೊಳ್ಳುವ, ಕಮರಿಸುವ, ಅವರ ಆಸೆ–ಆಕಾಂಕ್ಶೆಗಳಿಗೆ ತಣ್ಣೀರೆರಚುವ, ಅವರ ಆಸಕ್ತಿಯನ್ನು ಕುಂದಿಸುವ ಕೆಲಸ ಮಾಡಬಾರದು. ಈ ವಯಸ್ಸಿನಲ್ಲಿ ಮಗುವಿನ ಆಸಕ್ತಿ ಅಬಿರುಚಿಗಳನ್ನು ಗುರುತಿಸಿ ಸೂಕ್ತ ವೇದಿಕೆಯನ್ನು ಒದಗಿಸಿದ್ದೇ ಆದರೆ ಈ ಸಮಾಜಕ್ಕೆ ಭವಿಷ್ಯದ ಒಬ್ಬ ಅದ್ಬುತ ವ್ಯಕ್ತಿಯನ್ನು ಕೊಡುಗೆಯಾಗಿ ನೀಡುವುದರಲ್ಲಿ ಎರಡು ಮಾತಿಲ್ಲ. ನಾವು ನಮ್ಮ ಮಕ್ಕಳಿಗೆ ಸೋಲುಗಳನ್ನು ಒಪ್ಪಿಕೊಳ್ಳುವ, ಗೆಲುವನ್ನು ಆನಂದಿಸುವ ಜೊತೆಗೆ ತಮ್ಮ ಸೋಲನ್ನೂ ಸರಿಯಾದ ರೀತಿಯಲ್ಲಿ ಗೆಲುವಾಗಿಸಿಕೊಳ್ಳುವ, ಅವರಿಗೆ ಉಂಟಾದ ಅವಮಾನಗಳನ್ನು ಅಭಿಮಾನವಾಗಿಸಿಕೊಳ್ಳುವ ಮನಸ್ತಿತಿಯನ್ನು ಬೆಳೆಸಿಕೊಳ್ಳಲು ಕಲಿಸಬೇಕು. ಈ ಸಮಾಜದಲ್ಲಿ ನನ್ನ ಅಗತ್ಯವೇನು ಎಂಬುದನ್ನು ಬಾಲ್ಯದಲ್ಲಿಯೇ ಮನವರಿಕೆ ಮಾಡಿಕೊಡಬೇಕು. ತಮಗಾಗುವ ನೋವು ನಲಿವು, ಕಷ್ಟ–ನಷ್ಟಗಳನ್ನು, ಸಮಾನ ಮನಸ್ಥಿತಿಯಿಂದ ಸ್ವಿಕರಿಸುವ ಸಮಚಿತ್ತೆತ್ತೆಯನ್ನು ಬೆಳಸಿಕೊಳ್ಳಲು ಸಹಕರಿಸಬೇಕು. ಇಂತಹ ಅನರ್ಘ್ಯ ಸಮಾಜಮುಖಿ ಅಂಶಗಳನ್ನು ಕಲಿಸುವ ಜವಾಬ್ದಾರಿ ಎಲ್ಲರ ಮೇಲೂ ಇದೆ.

ನಮ್ಮ ಮಕ್ಕಳೆ ನಮ್ಮ ಬದುಕಿನ ಆದರ್ಶವಾಗಬೇಕು, ನಮ್ಮ ಭವಿಷ್ಯದ ಬರವಸೆಯಾಗಬೇಕು ನಮ್ಮ ಭವಿತವ್ಯದ ಭದ್ರ ಬುನಾದಿಯಾಗಬೇಕು. ಹಾಗಾಗಿ ಬಹು ಅಕ್ಕರೆಯಿಂದ ನಮ್ಮ ಮಕ್ಕಳನ್ನು ಸಂರಕ್ಷಿಸಬೇಕು ಅಗತ್ಯ ಸಂಸ್ಕಾರವನ್ನು ನೀಡಬೇಕು. ಅಪಾಯದ ಕೈಗಳಿಂದ ಅವರನ್ನು ರಕ್ಷಿಸಬೇಕು, ಮಕ್ಕಳನ್ನು ಶೊಷಿಸುವ ವ್ಯವಸ್ತೆಯಿಂದ ದೂರವಿರಿಸಬೇಕು. ಸಾಮಾಜಿಕ ಪಿಡುಗುಗಳು ಬಾದಿಸದಂತೆ ಎಚ್ಚರಿಕೆ ವಹಿಸಬೇಕು. ಆಗ ಮಾತ್ರ ಮನಕುಲ ಭವ್ಯ ಭವಿಷ್ಯ ಉಜ್ವಲವಾಗಬಹುದು, ಪ್ರತಿಯೊಬ್ಬರೂ ಸುಭದ್ರವಾಗಿ, ಸುರಕ್ಷಿತವಾಗಿ ಮತ್ತು ಸಂತ್ರುಪ್ತಿಯಿಂದ ಬದುಕಲು ಸಾದ್ಯವಾಗುವುದು.

ನೆನಪಿರಲಿ ಕೇವಲ ಅಭಿವೃದ್ದಿ ಹೊಂದಿದ ಭಾರತವನ್ನಷ್ಟೇ ನೋಡುವುದು ನಮ್ಮ ಗುರಿಯಲ್ಲ, ಆರೋಗ್ಯವಂತ ಭಾರತವನ್ನು ನಿರ್ಮಾಣ ಮಾಡಬೇಕಾಗಿದೆ. ಹಾಗಾಗಿ ಬೆಳವ ಸಿರಿ ಮೊಳಕೆಯಲ್ಲಿ ಎನ್ನುವಂತೆ, ಇಂದಿನ ಮಕ್ಕಳೆ ಮುಂದಿನ ಜವಾಬ್ದಾರಿಯುತ ಪ್ರಜೆಗಳು ಎಂದಾದ ಮೇಲೆ ಅವರ ನಿಜವಾದ ಕಾಳಜಿ ಬಾಲ್ಯದಿಂದಲೆ ಆರಂಭವಾಗಬೇಕಲ್ಲವೆ? ಅದಕ್ಕಾಗಿಯೇ ಹೇಳಿದ್ದು ಭವಿಷ್ಯದ ಬರವಸೆ ಎನ್ನುವುದಿದ್ದರೆ ಅದು ನಮ್ಮ ಮಕ್ಕಳಲ್ವೆ? ಯೋಚಿತ, ಯೋಜಿತ ಹೂಡಿಕೆ ಎನ್ನುವುದಿದ್ದರೆ ಅದು ನಿಮ್ಮ ಮಕ್ಕಳೆ ಮರೆಯದಿರಿ.



# ನಿರುದ್ಯೋಗಿಗಳಿಗೆ ಯುವ ನಿಧಿ: ಸಿಎಂ ಘೋಷಣೆ

**ಚಾರಿತ್ರಿಕ ಉದ್ಯೋಗ ಮೇಳ ಉದ್ಘಾಟಾನ ಕಾರ್ಯಕ್ರಮ | 80 ಉದ್ಯಮಿಗಳು, ಕಂಪನಿಗಳು, ಒಂದು ಲಕ್ಷದಷ್ಟು ವಿದ್ಯಾರ್ಥಿಗಳು ಭಾಗಿ**

**ಹೊಸದಾಗಿ GTDC ಗಳ ಸ್ಥಾಪನೆ | ಮುಖ್ಯಮಂತ್ರಿ ಮಹತ್ವದ ಘೋಷಣೆ | ನಿರುದ್ಯೋಗ ಪ್ರಮಾಣ ದೇಶದಲ್ಲಿ ಶೇ8.40ಕ್ಕೆ ಏರಿಕೆ**

**ಬೆಂಗಳೂರು** : ನಿರುದ್ಯೋಗಿ ಯುವಕರಿಗೆ ಯುವ ನಿಧಿ ಕೊಡುವ ಜತೆಗೆ ಇವರಿಗೆ ಉದ್ಯೋಗ ಸೃಷ್ಟಿಸುವ ಮತ್ತು ಉದ್ಯೋಗ ಮಾಡಲು ಅಗತ್ಯವಾದ ತರಬೇತಿಗಳನ್ನೂ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಅರಮನೆ ಮೈದಾನದಲ್ಲಿ ನಡೆದ ಬೃಹತ್ ಯುವ ಸಮೃದ್ಧಿ ಸಮ್ಮೇಳನ ಮತ್ತು ಬೃಹತ್ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ನಿರುದ್ಯೋಗ ದೇಶದ ಪ್ರಮುಖ ಸಮಸ್ಯೆಯಾಗಿದೆ. ಕಳೆದ 10 ವರಗಷಗಳಲ್ಲಿ ನಿರುದ್ಯೋಗ ಪ್ರಮಾಣ ಬೃಹತ್ತಾಗಿ ಬೆಳೆದಿದೆ. 2014 ರಲ್ಲಿ ಪ್ರಧಾನಿ ಮೋದಿ ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೀನಿ ಎಂದು ಭರವಸೆ ನೀಡಿ ಯುವ ಸಮೂಹದ ಮತ ಗಳಿಸಿದರು. ಈ 10 ವರ್ಷದಲ್ಲಿ 20 ಕೋಟಿ ಉದ್ಯೋಗ ಸೃಷ್ಟಿಸಬೇಕಿದ್ದ ಮೋದಿಯವರು, ಇರುವ ಯದ್ಯೋಗಗಳನ್ನೂ ಕಸಿದುಕೊಂಡಿದ್ದಾರೆ. ಹೀಗಾಗಿ ಪ್ರತೀ ವರ್ಷ ನಿರುದ್ಯೋಗ ಪ್ರಮಾಣ ಬೃಹತ್ತಾಗಿ ಬೆಳೆಯುತ್ತಾ




8.40 ಶೇ ಏರಿಕೆಯಾಗಿದೆ ಎಂದು ಅಂಕಿ ಅಂಶಗಳ ಸಮೇತ ವಿವರಿಸಿದರು.

ನಾವು ಯುವ ನಿಧಿಯನ್ನೂ ಕೊಡ್ತೀವಿ. ಉದ್ಯೋಗವನ್ನೂ ಸೃಷ್ಟಿಸುತ್ತೇವೆ, ಉದ್ಯೋಗಕ್ಕೆ ಬೇಕಾದ ಕೌಶಲ್ಯ ತರಬೇತಿಯನ್ನೂ ನೀಡುತ್ತೇವೆ. ಇದು ನಮ್ಮ ಸರ್ಕಾರ ವಿದ್ಯಾರ್ಥಿ ಯುವಜನರಿಗೆ ಮಾಡುವ ಅಭಯ ಎಂದು ಭರವಸೆ ನೀಡಿದರು. ಹೊಸ ಹೊಸ ಉದ್ಯೋಗ ಸೃಷ್ಟಿ ಮತ್ತು ತರಬೇತಿಗಾಗಿ ಈಗಿರುವ ಉಖಿಆಅ ಗಳ ಜತೆಗೆ ಹೊಸದಾಗಿ ಇನ್ನಷ್ಟು GTDC ಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ಮಹತ್ವದ ಘೋಷಣೆ ಮಾಡಿದರು.

ವೈದ್ಯಕೀಯ ಶಿಕ್ಷಣ ಸಚಿವರಾದ ಶರಣಪ್ರಕಾಶ್ ಪಾಟೀಲ್, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ, ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕೌಶಲ್ಯ ಅಭಿವೃದ್ಧಿ ಇಲಾಖೆಯ ಉನ್ನತ ಅಧಿಕಾರಿಗಳು, ನೂರಾರು ಉದ್ಯಮಿಗಳು, ಸುಮಾರು 80 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

# ಮಕ್ಕಳ ಪ್ರತಿ ತಪ್ಪಿಗೂ ತಾಯಿನೇ ಹೊಣೆನಾ?

ಪಿತೃ ಪ್ರಧಾನತೆ ಎಂಬುದು ಪ್ರಸ್ತುತಒಂದು ಸಾಂಸ್ಥಿಕ ಸ್ವರೂಪವನ್ನು ಹೊಂದಿದೆ ಎನ್ನಲು ಕುಟುಂಬದಲ್ಲಿ ತಂದೆತಾಯಿ ಇಬ್ಬರು ಮಕ್ಕಳ ಜವಾಬ್ದಾರರಾಗಿದ್ದರು ತಾಯಿ ಮಾತ್ರ ಜವಾಬ್ದಾರಿ ನಿರ್ವವಹಕಳಾಗಿ ಕಾಣಿಸುತ್ತಾಳೆ ಏಕೆ? ತಾಯಿಯನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಭಾವಿಸಿಕೊಳ್ಳುವ ಕ್ರಮಕ್ಕೆ ಪ್ರತಿಯಾಗಿ ಅವಳನ್ನು ಕುಟುಂಬದ, ಗಂಡನ, ಮಕ್ಕಳ ಹಿತಾಸಕ್ತಿಯನ್ನು ಕಾಪಾಡುವ ಒಂದು ಸಾಧನವಾಗಿ ಮಾತ್ರ ಎಂಬ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ಕಂಡುಬರುತ್ತದೆ. ಸಮುದಾಯಗಳಲ್ಲಿ ಸಮಸಮಾಜ ಚಿಂತನೆಗಳಲ್ಲಿ ಪ್ರಾಸಂಗಿಕವಾಗಿಗಂಡು ಹೆಣ್ಣುಗಳ ಸಂಬಂಧಗಳನ್ನು ಸಮಾನವಾಗಿ ನೋಡುವ ಸಮಾಜ ಇಂದಿನ ಕಾಲದಲ್ಲೂ ಕೂಡ ಕಡಿಮೆ ಇದೆ. ಸಂತಾನ ಸೃಷ್ಟಿಯಲ್ಲಿ ಮಾತೃತ್ವ ಎಂಬುದಕ್ಕೆ ಪ್ರಕೃತಿ ಸಹಜವಾಗಿ ನೇರ ಸಾಕ್ಷಿ ದೊರೆಯುತ್ತದಾದರೆ, ಪಿತೃಪ್ರಧಾನವೇಯಾಕೆ ಹೆಚ್ಚು?ಕುಟುಂಬವು ನೀಡುವಕೊಡುಗೆಯೇ ಪಿತೃ ಪ್ರಧಾನತೆಯ ಮುಖ್ಯ ಆಧಾರ ಎಂದರೂ, ಹುಟ್ಟಿದ ಕ್ಷಣದಿಂದಲೇ ಕುಟುಂಬವು ಮಕ್ಕಳಿಗೆ ನೀಡುವ ಸಾಮಾಜೀಕರಣ ತರಬೇತಿಯು ಶುರು ಆಗುತ್ತದೆ.ಅದುಮಕ್ಕಳಿಗೆ ಮನೆಯಎಲ್ಲಾ ಸದ್ಯಸರು ಪಿತೃಪ್ರಧಾನತೆಯ ಪಾಠಗಳನ್ನು ಕಲಿಸುವವರೇ ಆಗಿಬಿಡುತ್ತಾರೆ. ಮಕ್ಕಳು ತಮ್ಮ ಪಾತ್ರ, ಮನೋಧರ್ಮ ಹಾಗೂ ಸ್ಥಾನಗಳೇನು ಎಂಬುದನ್ನು ಕಲಿತು ಅವನ್ನೇ ಪಾಲಿಸುವಂತೆಆಗುತ್ತಾರೆ.ಅದೇರೀತಿ ಮಕ್ಕಳನ್ನು ಬೆಳೆಸುವ ತಾಯಿ ಇಲ್ಲಿ ಒಂದಷ್ಟು ಭಿನ್ನವಾಗಿ ಬಿಡುತ್ತಾರೆ. ಸಾಮಾಜೀಕರಣದ ಪ್ರಭಾವತಾಯಿಂದ ಶುರುವಾಗುವ ರೀತಿಯಲ್ಲಿ ಈ ಪಿತೃ ಪ್ರಧಾನ ಕುಟುಂಬ ನೋಡಿಕೊಳ್ಳುತ್ತವೆ.




ಮಗು ಗರ್ಭದಲ್ಲಿ ಇರುವಾಗಲೇ ತಾಯಿ ಶಿಕ್ಷೆಗೆ ಒಳಪಡುತ್ತಾಳೆ. ಗರ್ಭಿಣಿಯಾಗಿದ್ದಾಗ ಅವಳು ಕುಂತರೆತಪ್ಪು ನಿಂತರೆತಪ್ಪು, ಅವಳಿಗೆ ಇಷ್ಟವಾಗುವ ಪದಾರ್ಥ ತಿಂದರೆ ತಪ್ಪು, ಏಕೆಂದರೆ ವಂಶೋದ್ಧಾರಕನನ್ನು ಅವಳು ಹೊತ್ತಿದ್ದಾಳೆ ಎನ್ನುವ ಕಾರಣಕ್ಕೆ. ಮಗುವಿನ ಬಗ್ಗೆ ಇರುವ ಕಾಳಜಿ ಅದನ್ನು ಹೊತ್ತತಾಯಿಯ ಮೇಲೆ ಯಾಕೆ ಇರುವುದಿಲ್ಲ. 'ಈ ಲೋಕಕ್ಕೆ ಒಂದು ಮಗುವು ಬರಬೇಕುಎಂದರೆ, ತಾಯಿ ಎಷ್ಟು ಕಷ್ಟಪಡಬೇಕು. ಆದರೆಕಷ್ಟಪಟ್ಟು ಹೆತ್ತತಾಯಿಗೆ ಮಗುವನ್ನು ಬೆಳೆಸುವುದು ಗೊತ್ತಿರಲ್ವಾ.ಆದರೆ ಪಿತೃಪ್ರಧಾನ ಕುಟುಂಬದಲ್ಲಿ ಮಕ್ಕಳು ಬೇಳೆಯುವಾಗ ಬಿದ್ದರೆ ಎದ್ದರೆ ತಾಯಿದೆತಪ್ಪು ನೀನು ಮಗುವನ್ನು ಸರಿಯಾಗಿ ನೋಡಿಕೊಳ್ಳಲು ಆಗಲ್ವಾ ಎನ್ನುವ ಪ್ರಶ್ನೆ ಕುಟುಂಬದಎಲ್ಲಾರ ಬಾಯಿಯಲ್ಲಿ ಬರುತ್ತೇ. ಮಗು ಸರಿಯಾಗಿತಿನ್ನದೇ ಇದ್ದಾಗ ಮತ್ತು ಆ ಮಗು ದಷ್ಟ ಪುಷ್ಟವಾಗಿ ಆಗದೇ ಇದ್ದಾಗ, ಮಗು ಹುಷಾರುತಪ್ಪಿದರೆ ಅಯ್ಯೋ ಅದಕ್ಕೆ ಪೌಷ್ಟಿಕ ಆಹಾರ ತಿನ್ನಿಸದೆ ಇರುವುದಕ್ಕೆ ಮಗುವಿಗೆ ಹೀಗಾಯತು ಎಂದು ಅದಕ್ಕೂ ತಾಯಿನಾ ಹೊಣೆ ಮಾಡುತ್ತೆ ಈ ಕುಟುಂಬ! ಕುಟುಂಬದಲ್ಲಿ ತಂದೆ ತಾಯಿ ಇಬ್ಬರು ಇದ್ದರು, ಮಗುವನ್ನು ಬೆಳೆಸುವುದರಲ್ಲಿ ತಾಯಿ ಪಾತ್ರ ಹೆಚ್ಚಾಗಿರುತ್ತದೆ.24 ಗಂಟೆ ಮನೆಯಲ್ಲಿಇರುತ್ತಿಯ ನೀನು ಹೆತ್ತಿರುವ ಮಕ್ಕಳನ್ನುಚೆನ್ನಾಗಿ ನೋಡಿಕೊಳ್ಳಲು ಆಗುವುದಿಲ್ಲವಾ ಎಂಬ ಮಾತು ಮತ್ತೆ ಮತ್ತೆ ಬರುತ್ತೇ. ತಾಯಿ ಉದ್ಯೋಗ ಮಾಡುತ್ತಿದ್ದರೆ ಅವಳು ಆ ಉದ್ಯೋಗವನ್ನು ತ್ಯಾಗ ಮಾಡಿ ಮಗುವನ್ನು ಸಾಕಬೇಕು ಇಲ್ಲದಿದ್ದರೆ ಅವಳು ಬೇಜವಬ್ದಾರಿ ಹೆಂಗಸು ಎನ್ನಿಸಿಕೊಳ್ಳುತ್ತಾಳೆ. ಒಬ್ಬತಾಯಿ ಮನೆ, ಕುಟುಂಬ, ಮಕ್ಕಳು ಮತ್ತು ಉದ್ಯೋಗ ಇವೆಲ್ಲವನ್ನು ತೂಗಿಸಿಕೊಂಡು ಹೋಗುವ ಶಕ್ತಿ ಇದ್ದರು ಅವರಿಗೆ ಮನೆಯಲ್ಲಿ 'ಸಹಾಯಕ' ರಿರುವುದಿಲ್ಲವೆಂದು ಯಾರಿಗೂ ಜ್ಞಾಪಕ ವಿರುವುದಿಲ್ಲ, ಅದು ಏನೇ ಇದ್ದರು ಅವಳು ಒಬ್ಬಳೆ ನಿಭಾಯಿಸುವುದು ಎಂದು ನಿರ್ಧರಿತವಾಗಿರುತ್ತದೆ.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ

Scan For Digital Colourful
HAMPI TIMES E-paper

ಕುಟುಂಬ ನಿರ್ವಹಿಸಬೇಕಾದ ಕರ್ತವ್ಯಗಳ ಪೈಕಿ ಹೆಣ್ಣಿನ ಪಾತ್ರದೊಡ್ಡದು, ಗಂಡು ದುಡಿದು ಹಾಕುವ ಯಜಮಾನ ಅಷ್ಟೇ. ಹೆಣ್ಣು ಮಕ್ಕಳು ಹೇರುವಯಂತ್ರ ಅಷ್ಟೇ. ಮಕ್ಕಳ ಪಾಲನೆ ಪೋಷಣೆ, ಕುಟುಂಬ, ಮನೆ ಕೆಲಸ ನಿಭಾಯಿಸುವುದಾಗಿರುತ್ತದೆ. ಕುಟುಂಬದ ಜಗಳದಲ್ಲಿ ಮಕ್ಕಳ ವಿಷಯಕ್ಕೆ ಬೈಸಿಕೊಳ್ಳುವುದು ತಾಯಿ, ಇದು ಅವಳ ದಿನ ಹೇಗುವ ಪರಿಸ್ಥಿತಿ. ಮಕ್ಕಳನ್ನು ಪ್ರೀತಿಸಿ ಮುದ್ದಿಸಿ ಬೆಳೆಸಿದರೆ ಅದುತಪ್ಪಾಗಿ ನೋಡುವ ಕುಟುಂಬ, ಮತ್ತೊಂದು ಕಡೆ ದಂಡಿಸಿದರು ತಪ್ಪಾಗಿ ನೋಡುವ ಹಿರಿಯರು ಇದು ತಾಯಿಗೆ ತೋಳಲಾಟದ ವಿಷಯ. ಪುರುಷರು ತಾಯಂದಿರ ಅನುಭವಗಳನ್ನು ಗಮನಿಸದೆ ಏನೇನೋ ಸೂತ್ರಗಳನ್ನು ತಯಾರು ಮಾಡುತ್ತಾರೆ. ಅವುಗಳಿಂದ ಪರಿಸ್ಥಿತಿ ಮತ್ತಷ್ಟು ಗೊಂದಲಮಯವಾಗುತ್ತದೆ. ಆ ವಿಷಯಕ್ಕೂ ವಾಸ್ತವ ಪರಿಸ್ಥಿತಿಗೂ ಹೊಂದಾಣಿಕೆ ಯಾಗದೆ ತಾಯಂದರು ಹಿಂಸೆಯನ್ನು ಅನುಭವಿಸುತ್ತಾರೆ. ತಾಯಂದರು ತಮ್ಮ ಮಕ್ಕಳ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದರೆ 'ಅದೆಲ್ಲ ನಿಮ್ಮಕೆಲಸ ಆಫೀಸಿನ ಕೆಲಸದಲ್ಲಿ ಮಕ್ಕಳ ಕಡೆ ಗಮನ ಕೊಡಲು ಆಗುವುದಿಲ್ಲ ಎಂಬ ತಂದೆಯ ಧೋರಣೆ ಮಾತು ಕೇಳಿ ಬರುತ್ತದೆ. ಮಕ್ಕಳನ್ನು ಹೆರುವುದು, ಮಕ್ಕಳನ್ನು ಬೆಳೆಸುವುದು ಹೆಣ್ಣಿನ ವ್ಯಕ್ತಿಗತ ವಿಷಯಗಳಲ್ಲವೆಂಬ, ಅವು ಸಮಾಜಕ್ಕೆ ಅಗತ್ಯವಾದ, ಸಮಾಜ ಜವಾಬ್ದಾರಿ ವಹಿಸಬೇಕಾದ ವಿಷಯಗಳೆಂಬ ಅರಿವು ಪುರುಷಾಧಿಪತ್ಯ ಸಮಾಜಕ್ಕೆಇಲ್ಲ.

ಮಕ್ಕಳು ಸಾಧನೆ ಮಾಡಿದಾಗತಂದೆ ನಮ್ಮ ವಂಶದಕುಡಿ ಎಂದು ಹೆಮ್ಮೆ ಪಡುತ್ತಾರೆ ಆದರೆ ಅದೆ ಮಗು ತಪ್ಪು ಮಾಡಿದಾಗ ತಾಯಿಯನ್ನು ನಿಮ್ಮ ವಂಶನೇ ಈಗೆ ಎಲ್ಲಾ ನಿನ್ನ ಹಾಗೆ ಕಲಿತಿರುವರು ಎಂದು ದೂರುತ್ತಾರೆ. ಹೆಣ್ಣು ಮಕ್ಕಳು ತಪ್ಪು ಮಾಡಿದರೆ 'ತಾಯಿಯಂತೆ ಮಗಳು ನೂಲಿನಂತೆ ಸೀರೆ', 'ತಾಯೀನ ನೋಡಿ ಮಗಳನ್ನ ತಂದುಕೋ' ಎಂದು ಮಗಳ ಜೊತೆ ತಾಯಿಯನ್ನು ದೂಷಣೆ ಮಾಡುವ ಪರಿಪಾಠ ಈ ಸಮಾಜದಲ್ಲಿ ಕಂಡುಬರುತ್ತದೆ. ಯಾಕೆ ಈಗೆ ಮಕ್ಕಳು ಸಾಧನೆ ಮಾಡಿದರೆತಮ್ಮ ವಂಶದಕುಡಿ ಎಂದು ಬೀಗುವುದು, ತಪ್ಪು ಮಾಡಿದಾಗ ತಾಯಿಯನ್ನು ದೂರುವುದು ಇದು ಯಾವ ನ್ಯಾಯಾ. ಕುಟುಂಬ ಎಂದರೆತಂದೆ, ತಾಯಿ, ಮಕ್ಕಳು, ಅಜ್ಜ, ಅಜ್ಜಿ, ಚಿಕ್ಕಪ್ಪ, ದೊಡ್ಡಪ್ಪ ಹೀಗೆ ಎಲ್ಲರು ಸೇರಿದಾಗಕುಟುಂಬವಾಗುತ್ತದೆ. ಮಕ್ಕಳ ವಿಷಯದಲ್ಲಿ ತಾಯಿ ಮಾತ್ರ ಹೇಗೆ ಎಲ್ಲದಕ್ಕೂ ಹೊಣೆಯಾಗುತ್ತಾಳೆ. ಅದು ತಪ್ಪು ಮಾಡಿದಾಗ ಮಾತ್ರಯಾಕೆ, ಅದೆ ಮಕ್ಕಳ ಸಾಧನೆಗೆ ತಾಯಿಯನ್ನುಯಾಕೆ ಹೊಣೆ ಮಾಡುವುದಿಲ್ಲ. "ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲ ಗುರು"ಎಂದು ಪಿತೃಪ್ರಧಾನ ಕುಟುಂಬಗಳು ಹೇಳಿ ತಮ್ಮಜವಾಬ್ದಾರಿಯಿಂದ ಕಳಚಿಕೊಂಡಿದಿಯ ಎಂದು ನನ್ನ ಪ್ರಶ್ನೆ?ತಾಯಿ ತನ್ನ ಮಕ್ಕಳ ಬಗ್ಗೆ ಒಳ್ಳೆಯದನ್ನೆ ಬಯಸುತ್ತಾಳೆ ಹೊರೆತುಕೆಟ್ಟದ್ದನ್ನುಯಾವಾಗಲು ಬಯಸುವುದಿಲ್ಲ. ಮಕ್ಕಳಿಗೊಸ್ಕರ ತನ್ನಎಲ್ಲಾ ಸುಖವನ್ನು ತ್ಯಾಗ ಮಾಡಿ ಅವರ ಪೋಷಣೆಗೆ ಬದ್ಧವಾಗಿರುತ್ತಾಳೆ. ಮಕ್ಕಳ ಪೋಷಣೆ ತಂದೆ ತಾಯಿ ಇಬ್ಬರ ಜವಾಬ್ದಾರಿಇದನ್ನುಗಮನದಲ್ಲಿಇಟ್ಟುಕೊಂಡುಜೀವನ ಪಯಣ ಸಾಗಬೇಕಿದೆ. ಮಕ್ಕಳ ತಪ್ಪು ಹೆಜ್ಜೆಗೆತಾಯಿಯನ್ನೇ ಹೊಣೆ ಮಾಡುವುದು ಎಷ್ಟು ಸರಿ? ಯೋಚನೆ ಮಾಡಬೇಕಾಗಿರುವ ವಿಷಯವಾಗಿದೆ.

---

**ಕವಿ ಮನಸು**

## ಕರಗುತಿದೆ ಸಮಯ



ಕರಗತೊಡಗಿದೆ ಸಮಯ
ಬೆರಗುಗೊಳ್ಳುವ ತರದೆ
ಸರಿದು ಹೋಗುತಲಿಹುದು ವ್ಯರ್ಥವಾಗಿ
ಬರಿದೆ ಯೋಚನೆಗಿಳಿದು
ನೆರಿಗೆಗಟ್ಟಿದೆ ದೇಹ
ಸುರಿಯದೆಲೆ ಕರಿಮುಗಿಲು ದೂರ ಸಾಗಿ

ಜಗದ ಬಾಳುವೆಯಲ್ಲಿ
ಸಿಗುವ ವೇಳೆಯೆ ಹೊನ್ನು
ತೆಗಳಿ ಕುಳಿತರೆ ಸಾಕೆ ಪರರ ಬಗೆಗೆ
ಬಗಲಿನಲ್ಲಿಹ ಮೃತ್ಯು
ಜಗಳವೇತಕೆ ಮನವೆ
ಗಗನ ಸೇರುವ ನಾವು ಬಾಳ ಕೊನೆಗೆ

ಜಿಪುಣನಾಗದೆ ಬಾಳು
ಚಪಲ ಕೆಟ್ಟದು ಕೇಳು
ವಿಫಲನಾಗದ ಹಾಗೆ ಹೆಜ್ಜೆಯಿರಿಸಿ
ಜಪವ ಗೈಯುತ ಹರಿಯ
ಸಫಲಗೊಳ್ಳಲಿ ಯತ್ನ
ಸುಫಲ ನೀಡಲಿ ಹರಿಯು ಕರುಣೆಯಿರಿಸಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

---

## ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಎಲೆಕ್ಟ್ರಾನಿಕ್, ಡಿಜಿಟಲ್ ಮಾಧ್ಯಮ ತರಬೇತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು**
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡಗಳ ಸಮುದಾಯದ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ತರಬೇತಿಯನ್ನು ನೀಡಲಾಗುತ್ತಿದ್ದು. ಈ ಕಾರ್ಯಕ್ರಮದಡಿ ಅರ್ಹ ಅಭ್ಯರ್ತಿಗಳಿಗೆ ವಸತಿ, ಊಟ , ಸಹಿತ ತರಬೇತಿಯನ್ನು ಬೆಂಗಳೂರಿನಲ್ಲಿ ನೀಡಲಾಗುವುದು ಹಾಗೂ ಆಸಕ್ತಿ ಇರುವ ವಿದ್ಯಾರ್ಥಿಗಳು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಹಾಗೂ ಅರ್ಜಿ ಸಲ್ಲಿಸಲು ಮಾ.15 ಕೊನೆಯ ದಿನಾಂಕವಾಗಿರುತ್ತದೆ ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

---

**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

**ಹಂಪಿ ಟೈಮ್ಸ್**
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ: ಕಚೇರಿ ವಿಳಾಸ:
ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201
ವಿಜಯನಗರ ಜಿಲ್ಲೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

---

# ನಾ– ಸತ್ತಿಲ್ಲ ನಾಟಕ ಪ್ರದರ್ಶನ ಕಲೆಗೆ ಜೀವ ತುಂಬಿದ ಕಲಾವಿದರು

**ಹಂಪಿ ಟೈಮ್ಸ್ ಇಲಕಲ್**
ರಂಗ ಕಲೆಯೂ ಕೂಡಾ ನಾ ಸತ್ತಿಲ್ಲವೆಂದೇ ಸಾರುತ್ತದೆ. ರಂಗ ಕಲೆಗೆ ಸಾವಿಲ್ಲ. ಅದು ಸದಾ ನಿರಂತರ ಎಂದು ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ವಿಜಯಪುರದ ಎಲ್.ಬಿ.ಶೇಖ ಮಾಸ್ತರ ಹೇಳಿದರು.

ನಗರದ ಅನುಭವ ಮಂಟಪ ಆವರಣದಲ್ಲಿ ಶನಿವಾರ ಹೊಸಪೇಟೆಯ ಕನ್ನಡ ಕಲಾ ಸಂಘ ಟಿ ಬಿ ಡ್ಯಾಂ ತಂಡದಿಂದ ಪ್ರದರ್ಶನಗೊಂಡ "ನಾ ಸತ್ತಿಲ್ಲ" ಎಂಬ ಕನ್ನಡ ನಾಟಕ ಪ್ರದರ್ಶನಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ರಂಗಕಲೆಯ ತವರೂರಾದ ಇಲಕಲ್ ನಲ್ಲಿ ಈ ನಾಟಕ ಪ್ರದರ್ಶನ ಆಯೋಜಿಸಿದ ರಂಗ ಕಲಾವಿದ, ರಂಗ ಸಂಘಟಕ ಹಾಗೂ ರಾಜ್ಯ ಪ್ರಶಸ್ತಿ ವಿಜೇತರಾದ ಮಹಾಂತೇಶ್ ಗಜೇಂದ್ರಗಡ ಅವರ ರಂಗ ಸೇವೆ ಶ್ಲಾಘನೀಯ ಎಂದರು.

ಒಬ್ಬ ವ್ಯಕ್ತಿಯು, ನಿಜವಾಗಿಯೂ ತಾನು ಸತ್ತಿಲ್ಲವಾದರೂ, ಜೀವಂತ ಇದ್ದೇನೆ ಎಂದು ಸಾದರಪಡಿಸುವುದು ಒಂದೆಡೆಯಾದರೆ, ಕಾನೂನು ಧರ್ಮ ಶಾಸ್ತ್ರದ ಆಧಾರದ ಮೇಲೆ ಸತ್ತಿದ್ದಾನೆಂದು ಪ್ರತಿವಾದಿಸುವುದು ಇನ್ನೊಂದೆಡೆ. ನ್ಯಾಯಾಲಯದಲ್ಲಿ ನಡೆಯುತ್ತಿರುವ ಈ ಮೊಕದ್ದಮೆಯನ್ನು ನಾಟಕ ರೂಪದಲ್ಲಿ ಅತ್ಯಂತ ಕುತೂಹಲಕಾರಿಯಾಗಿ ಕಾನೂನು, ಸಾಕ್ಷಿ, ಪುರಾವೆ, ಧರ್ಮಶಾಸ್ತ್ರಗಳ ತೊಡಕುಗಳಲ್ಲಿ ತರ್ಕಬದ್ಧವಾಗಿ ಡಾ. ಕೃಷ್ಣ ಕೋಲಾರ ಕುಲಕರ್ಣಿ ಅವರು ರಚಿಸಿದ " ನಾ ಸತ್ತಿಲ್ಲ" ನಾಟಕವನ್ನು ಹೊಸಪೇಟೆಯ 'ಕನ್ನಡ ಕಲಾ ಸಂಘ ಟಿ ಬಿ ಡ್ಯಾಂ' ತಂಡವು ಮನೋಜ್ಞವಾಗಿ ಪ್ರದರ್ಶಿಸಿತು.



ಪ್ರತಿವಾದಿ ವಕೀಲ ಭಂಢೆರಾವ ಪಾತ್ರ ವಹಿಸಿದ ಚಂದ್ರಶೇಖರ ಅವರ ಮಾತನಾಡುವ ಶೈಲಿ ಆಕರ್ಷಣೀಯವಾಗಿತ್ತು. ಅಲ್ಲದೇ ಪ್ರತಿವಾದಿ ಪರ ಸಾಕ್ಷಿಯಾದ ಪ್ರಚಂಡಾಚಾರ ಪಾತ್ರ ವಹಿಸಿದ ಶ್ರೀಕೃಷ್ಣ ಕುಲಕರ್ಣಿ ಅವರು ಶಾಸ್ತ್ರದ ಆಧಾರದಮೇಲೆ ತರ್ಕಬದ್ಧ ಉತ್ತರ ಕೊಡುವುದು ಪ್ರೇಕ್ಷಕ ಮೆಚ್ಚುಗೆ ಪಡೆಯಿತು. ವಾದಿ ಸತ್ಯವಂತರಾಗಿ ಶಿವಾನಂದ ಮತ್ತು ಅವರ ಪರ ವಕೀಲರಾದ ಡಾ. ರಾಜು ಕುಲಕರ್ಣಿ ಅವರ ಅಭಿನಯ ಗಮನ ಸೆಳೆಯಿತು. ಪ್ರತಿವಾದಿ ಧನ್ವಂತರಾವ ಗಂಭೀರತೆ ಪಾತ್ರಕ್ಕೆ ತಕ್ಕದಾಗಿತ್ತು. ನ್ಯಾಯಾಧೀಶರಾಗಿ ಹನುಮಂತ ಪೂಜಾರ, ಸಾಕ್ಷಿದಾರ ಬೀರಪ್ಪನಾಗಿ ಜಗದೀಶ್ ತಮ್ಮ ಪಾತ್ರಗಳಿಗೆ ಜೀವ ತುಂಬಿದರು. ಇನ್ನು ಸಹ ವಕೀಲರಾಗಿ ಈಶ್ವರ, ನಾಗರಾಜಾಚಾರ್ಯ, ಹಾಗೂ ನ್ಯಾಯಾಲಯ ಸಿಬ್ಬಂಧಿಯಾಗಿ ಜಾನ್, ಅಭಿಷೇಕ, ರಾಜಗೋಪಾಲ ಅವರುಗಳು ಸಮರ್ಪಕವಾಗಿ ಅಭಿನಯಿಸಿದರು.

ಪ್ರಸಾಧನ ಶ್ರೀನಿವಾಸ ಜೋಷಿ, ತಾಂತ್ರಿಕತೆ ಡಾ. ರಾಜು ಕುಲಕರ್ಣಿ, ಬೆಳಕು ಮಂಜುನಾಥ ಅವರದಾಗಿದ್ದರೆ, ವಿನ್ಯಾಸ ಮತ್ತು ನಿರ್ದೇಶನ ಜವಾಬ್ದಾರಿ ಶ್ರೀ ಶ್ರೀಕೃಷ್ಣ ಕುಲಕರ್ಣಿ ಅವರದಾಗಿತ್ತು. ಒಟ್ಟಾರೆಯಾಗಿ ಈ ಪ್ರದರ್ಶನ ಇಲಕಲ್ ನಗರ ಪ್ರೇಕ್ಷಕರ ಮನಸ್ಸನ್ನು ಗೆದ್ದಿತು.

---

# ಪ್ರತಿ ತಿಂಗಳು ಸ್ವಯಂ ಘೋಷಣೆ ಪ್ರಮಾಣ ಪತ್ರ ಕಡ್ಡಾಯ



**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಫಲಾನುಭವಿಗಳು, ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ತಿಂಗಳು ತಾವು ವ್ಯಾಸಂಗ ಮಾಡುತ್ತಿಲ್ಲ, ಸ್ವಯಂ ಉದ್ಯೋಗಿಯಲ್ಲ, ನಿರುದ್ಯೋಗಿ ಎಂದು ಸ್ವಯಂ ಘೋಷಣೆ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ಈ ಮಾಹೆಯಲ್ಲಿ ಫೆ.29ರ ಒಳಗಾಗಿ ಸೇವಾ ಸಿಂಧು ಪೋರ್ಟಲ್ ಮೂಲಕ ಸ್ವಯಂ ಘೋಷಣೆ ಪತ್ರ ಸಲ್ಲಿಸಲು ಕಾಲಾವಕಾಶವಿದೆ.

2022–23ನೇ ಶೈಕ್ಷಣಿಕ ವರ್ಷದಲ್ಲಿ ಪದವಿ, ಸ್ನಾತಕೊತ್ತರ ಪದವಿ ಮತ್ತು ಡಿಪ್ಲೋಮಾ ವ್ಯಾಸಂಗ ಮಾಡಿ 2023ರಲ್ಲಿ ತೇರ್ಗಡೆಯಾಗಿ ಅರ್ಹತೆ ಹೊಂದಿದ ಅಭ್ಯರ್ಥಿಗಳು ಈಗಾಗಲೇ ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿಯಾಗಿದ್ದು, ಈಗಾಗಲೇ ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ಜನವರಿ ತಿಂಗಳ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗಿದ್ದು, ಫೆಬ್ರವರಿ ತಿಂಗಳ ಪ್ರಯೋಜನ ಪಡೆದುಕೊಳ್ಳಲು ಸ್ವಯಂ ಘೋಷಣೆ ಮಾಡಬೇಕಾಗಿದೆ.

ಫಲಾನುಭವಿಗಳಿಗೆ ಎಸ್‌ಎಂಎಸ್ ಮೂಲಕ ಸಂದೇಶ ರವಾನಿಸಲಾಗುತ್ತದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ್ ಸೀಡೆಡ್ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.

ಫಲಾನುಭವಿಗಳು ಯುವ ನಿಧಿ ಯೋಜನೆಯ ಸ್ವಯಂ ಘೋಷಣೆ ಮಾಡಿಕೊಳ್ಳಲು https://sevasindhugs.karnataka.gov.in/ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಪ್ರಯೋಜನೆ ಪಡೆಯುತ್ತಿರುವ ಅರ್ಹ ಅಭ್ಯರ್ಥಿಗಳು ಪ್ರತಿ ತಿಂಗಳು ಸ್ವಯಂ ಘೋಷಣೆ ಪ್ರಮಾಣ ಪತ್ರ ನೀಡದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆಯನ್ನು ಮಾಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮೊ.8861866725, 9964502514 ಗೆ ಸಂಪರ್ಕಿಸಬಹುದು.

# ಮತ್ತೊಮ್ಮೆ ಮೋದಿ ಪ್ರಧಾನಿ ಅಭಿಯಾನ

## ಲೋಕ ಗೆಲುವಿಗೆ ಶ್ರಮಿಸಿ ಎಂದ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ । ಹಂಪಿ-ಕೊಟ್ಟೂರಿನಲ್ಲಿ ಯುವ ಮೋರ್ಚಾದಿಂದ ಗ್ರಾಮ ಚಲೋಗೆ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಭಾರತವನ್ನು ವಿಶ್ವಗುರು ಆಗಿಸುವ ಸಲುವಾಗಿ ಪ್ರತಿಯೊಬ್ಬ ಯುವಕರು ಬಿಜೆಪಿ ಗೆಲುವಿಗೆ ಶ್ರಮಿಸಬೇಕು ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಹೇಳಿದರು.

ತಾಲೂಕಿನ ಹಂಪಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಚಲೋ ಹಾಗೂ ಮತ್ತೊಮ್ಮೆ ಮೋದಿ ಸರ್ಕಾರ ಗೋಡೆ ಬರಹ ಕಾರ್ಯಕ್ರಮದಲ್ಲಿ ಮಾತನಾಡಿದರು. ನರೇಂದ್ರ ಮೋದಿಯವರು ಸದೃಢ ರಾಷ್ಟ್ರ ನಿರ್ಮಾಣ ಗುರಿ ಇಟ್ಟುಕೊಂಡು ಸತತ ಎರಡು ಬಾರಿ ಈ ದೇಶದ ಪ್ರಧಾನಿಯಾಗಿದ್ದಾರೆ. ಮುಂದೆ ಭಾರತವನ್ನು ವಿಶ್ವಗುರು ಆಗಿಸುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿರುವ ನರೇಂದ್ರ ಮೋದಿಜಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿಸಲು ಯುವಕರು ಬೂತ್ ಮಟ್ಟದಲ್ಲಿ ಶ್ರಮಿಸಬೇಕು ಎಂದು ಕರೆ ನೀಡಿದರು.

ವಿಶ್ವ ವಿಖ್ಯಾತ ಹಂಪಿಯಲ್ಲಿ ವಿದೇಶಿ ಪ್ರವಾಸಿಗರು ಮತ್ತೊಮ್ಮೆ ಮೋದಿ ಗೋಡೆ ಬರಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಘೋಷಣೆಗಳನ್ನು ಕೂಗಿದರು. ಅಲ್ಲದೇ ಕೇಂದ್ರ ಸರ್ಕಾರದ ಯೋಜನೆಗಳು ಪ್ರತಿಯೊಂದು ಮನೆಗೆ ಮುಟ್ಟಿಸುವಲ್ಲಿ ಯುವ ಮೋರ್ಚಾದ ಜವಾಬ್ದಾರಿ ಅಧಿಕವಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷ ಸೂಚಿಸಿದ ಕೆಲಸವನ್ನು ಮಾಡಬೇಕು ಎಂದರು.

ಹೊಸಪೇಟೆ ತಾಲೂಕು ಯುವ ಮೋರ್ಚಾ ಅಧ್ಯಕ್ಷ ಶ್ರೀಕಾಂತ್ ಪೂಜಾರ್, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಗುಳಗಿ ವೀರೇಶ್, ಪ್ರಧಾನ ಕಾರ್ಯದರ್ಶಿಗಳಾದ ಕೆ.ಎಚ್.ಎಂ.ಸಚೀನ್ ಕುಮಾರ್, ಬಿ.ಪ್ರದೀಪ್ ಕುಮಾರ್, ಕಾರ್ಯದರ್ಶಿ ಬಿ.ಮಹಾಲಕ್ಷ್ಮಿ, ಸೂರಜ್, ದೊರೆರಾಜ್, ಶಿವಕುಮಾರ್, ಲೋಕೇಶ್, ವಿ.ರಮೇಶ್ ಷಣ್ಮುಖಯ್ಯ, ಸತ್ಯವೇಲು, ವಿರುಪಾಕ್ಷಿ ಇತರರಿದ್ದರು.

### ಬಿಜೆಪಿ ಕಾರ್ಯಕರ್ತರಿಂದ ಗೋಡೆ ಬರಹ ಅಭಿಯಾನ

**ಹಂಪಿ ಟೈಮ್ಸ್ ಕೊಟ್ಟೂರು:**

ಕೊಟ್ಟೂರು ಪಟ್ಟಣದಲ್ಲಿ ಬಸವೇಶ್ವರ ನಗರ, ಮರಿಕೊಟ್ಟೂರೇಶ್ವರ ದೇವಸ್ಥಾನ ಸೇರಿದಂತೆ ಪಟ್ಟಣದ ವಿವಿಧ ಕಡೆ ಬಿಜೆಪಿ ಪಕ್ಷದ ಮಹಾ ಶಕ್ತಿ ಕೇಂದ್ರದ ಕಾರ್ಯಕರ್ತರು ಮೋದಿ ಮತ್ತೊಮ್ಮೆ ಪ್ರಧಾನಿ ಆಗಲೆಂದು ಗೋಡೆ ಬರಹ ಅಭಿಯಾನ ನಡೆಸಿದರು. ಹಗರಿ ಬೊಮ್ಮನಹಳ್ಳಿ ಮಂಡಲ ಅದ್ಯಕ್ಷ ಬೆಣಕಲ್ ಪ್ರಕಾಶ್, ಮಂಡಲ ಉಪಾದ್ಯಕ್ಷ ಅಂಗಡಿ ಪಂಪಾಪತಿ, ಕೊಟ್ಟೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಭರಮನಗೌಡ ಪಾಟೀಲ್, ಮಂಡಲ ಪ್ರಧಾನ ಕಾರ್ಯದರ್ಶಿ ಜೋಗಿ ಹನುಮಂತ, ಮಂಡಲ ಕಾರ್ಯದರ್ಶಿ ಹೆಚ್.ಆರ್. ಕೊಟ್ರೇಶ್, ಪಟ್ಟಣ ಪಂಚಾಯ್ತಿ ಸದಸ್ಯರಾದ ಜಿ ಸಿದ್ದಯ್ಯ,ಸಿಎಂ ಕೆಂಗಪ್ಪ, ಎಂ.ಕೊಟ್ರೇಶ್, ಹಾಗೂ ಕೊನಾಪುರ ಬಸವರಾಜ, ಕಲ್ಲೇಶ , ಶಿವಕುಮಾರ್ ಸಿ, ಮಲ್ಲಿಕಾರ್ಜುನ ಸ್ವಾಮಿ, ಮಡಿವಾಳರ ಚಂದ್ರಶೇಖರ, ಅರಮನಿ ಪ್ರಸಾದ್, ಅರಮನಿ ರೇವಣ್ಣ, ಹಳ್ಳಿ ಸಣ್ಣವೀರಪ್ಪ, ಜೆಎಸ್ ಜಗದೀಶ, ಡಿಶ್ ಗುರು, ಡಿಶ್ ಸಂತೋಷ, ಪ್ರಕಾಶ, ಪ್ರದೀಪ್ ತುಂಬರ ಗುದ್ದಿ, ಪ್ರಶಾಂತ್, ರವೀಂದ್ರ ಭಂಡಾರಿ ಇನ್ನಿತರರು ಹಾಜರಿದ್ದರು.



## ಖೇಲೊ ಇಂಡಿಯಾ ಯುನಿವರ್ಸಿಟಿಯಲ್ಲಿ ವಿವಿಯ ಆದಿತ್ಯಗೆ ಬೆಳ್ಳಿಯ ಪದಕ

**ಹಂಪಿ ಟೈಮ್ಸ್ ಬಳ್ಳಾರಿ**



ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಡಿ ಬರುವ ವೀರಶೈವ ಮಹಾವಿದ್ಯಾಲಯದ ಕುಸ್ತಿಪಟು ಆದಿತ್ಯ ಎನ್ನುವ ವಿದ್ಯಾರ್ಥಿ ನ್ಯಾಗಾಲ್ಯಾಂಡ್ ಕ್' ಊ ಹಿ ವ್' ಾ ದ' ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಫೆ.22 ರಿಂದ 25 ರ ವರೆಗೆ ನಡೆದ ಖೇಲೊ ಇಂಡಿಯಾ ಯುನಿವರ್ಸಿಟಿ ಕ್ರೀಡಾಕೂಟ– 2024 ಪುರುಷರ ಕುಸ್ತಿ (ಗ್ರೀಕೊ ರೋಮನ್ 87 ಕೆಜಿ) ಪಂದ್ಯಾವಳಿಯಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ, ದ್ವಿತೀಯ ಸ್ಥಾನ ಪಡೆಯುವುದರ ಮೂಲಕ ಬೆಳ್ಳಿಯ ಪದಕವನ್ನು ಪಡೆದು ಕರ್ನಾಟಕ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿರುತ್ತಾನೆ. ಈ ಕ್ರೀಡಾಪಟುವಿನ ಅಮೋಘ ಸಾಧನೆಗೆ ಮತ್ತು ತಂಡದ ವ್ಯವಸ್ಥಾಪಕರು ಹಾಗೂ ತರಬೇತುದಾರರಾದ ಮಲ್ಲಿಕಾರ್ಜುನ ವಾಯ್.ಡಿ. ರವರಿಗೆ ವಿಶ್ವವಿದ್ಯಾಲಯದ ಆಡಳಿತ ವರ್ಗದವರು ಮಾನ್ಯ ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಹಣಕಾಸು ಅಧಿಕಾರಿಗಳು, ಮಾನ್ಯ ಸಿಂಡಿಕೇಟ್ ಮತ್ತು ವಿದ್ಯಾ ವಿಷಯಕ ಪರಿಷತ್ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಹರ್ಷವ್ಯಕ್ತಪಡಿಸಿದ್ದಾರೆ.

## ಪರೀಕ್ಷಾ ಸುತ್ತಮುತ್ತ 200 ಮೀ. ವ್ಯಾಪ್ತಿ ನಿರ್ಬಂಧ ವಿಧಿಸಿ ಡಿಸಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಾದ್ಯಂತ ಮಾರ್ಚ್ 01 ರಿಂದ 22 ರ ವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಒಳಗಿನ



ಆವರಣವನ್ನು ದಂಡ ಪ್ರಕ್ರಿಯಾ ಸಂಹಿತೆ 1973 ರ ಕಲಂ 144ರ ಮೇರೆಗೆ ನಿರ್ಭಂಧಿತ ಪ್ರದೇಶ ವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಾದ್ಯಂತ ಒಟ್ಟು 16 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ.

ಆಯಾ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನಲ್ಲಿರುವ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಮುಚ್ಚುವಂತೆಯೂ ಮತ್ತು ಈ ಆದೇಶವು ಪರೀಕ್ಷಾ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಯಶಸ್ವಿ ಜೀವನಕ್ಕೆ ಪರಿಶ್ರಮ ಸಾಧಿಸುವ ಛಲ ಇರಬೇಕು

## ಷ.ಬ್ರ.ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಸಲಹೆ । ವಿದ್ಯಾರ್ಥಿಗಳು ಸತತವಾಗಿ ಸ್ಪಷ್ಟ ಗುರಿ ಸಾಧಿಸುವ ಛಲ ಹೊಂದಿದ್ದರೆ ಜೀವನದಲ್ಲಿ ಯಶಸ್ಸು ಸಾಧ್ಯ




**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳು ಸತತ ಪರಿಶ್ರಮ, ಸ್ಪಷ್ಟ ಗುರಿ ಸಾಧಿಸುವ ಛಲ ಹೊಂದಿದ್ದರೆ ಜೀವನದಲ್ಲಿ ಯಶಸ್ಸು ಸಾಧ್ಯ ಎಂದು ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ಅಧ್ಯಕ್ಷರಾದ ಷ.ಬ್ರ. ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಟಿ ಎಂ ಎ ಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಪಿಯು ಕಾಲೇಜಿನಲ್ಲಿ ಶನಿವಾರ ನಡೆದ ಸಾಧಕ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಸೋಲುಗಳಿಂದ ಮನುಷ್ಯ ಹೆಚ್ಚು ಪಾಠ ಕಲಿಯುತ್ತಾನೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕಠಿಣ ಪರಿಶ್ರಮ, ಸ್ಪಷ್ಟ ಗುರಿ, ಸಾಧಿಸುವ ಛಲ, ಪ್ರಾಮಾಣಿಕ ಪ್ರಯತ್ನ, ಗುರುಗಳ ಸಮರ್ಪಕ ಮಾರ್ಗದರ್ಶನ ಇದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಶಿಕ್ಷಣ ಇಂದು ವ್ಯಾಪಾರಿಕರಣವಾಗುತ್ತಿದೆ. ಆದರೆ ಟಿ ಎಂ ಎ ಇ ಸಂಸ್ಥೆಗಳು ಸೇವಾ ಮನೋಭಾವನೆಯಿಂದ ಶಿಕ್ಷಣ ನೀಡುತ್ತಾ ಬರುತ್ತಿವೆ. ಮಧ್ಯ ಕರ್ನಾಟಕ ಭಾಗದಲ್ಲಿ ಟಿ ಎಂ ಎ ಇ ಸಂಸ್ಥೆ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡುತ್ತಿವೆ. ಹೊಸಪೇಟೆಯ ಟಿಎಂಎಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಕಾಲೇಜು ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ತನ್ನದೇ ಆದ ವಿಶಿಷ್ಟ ಸಾಧನೆಯನ್ನು ಮಾಡಿದೆ. ಕಾಲೇಜು ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಉಪನ್ಯಾಸಕ ವೃಂದದವರ ಮಾರ್ಗದರ್ಶನ ಪ್ರೋತ್ಸಾಹ ಈ ಸಾಧನೆಗೆ ಕಾರಣವಾಗಿದೆ ಎಂದು ಅವರು ಶ್ಲಾಘಿಸಿದರು.

ಟಿ ಎಂ ಎ ಇ ಸಂಸ್ಥೆಯ ಉಪ ಕಾರ್ಯದರ್ಶಿ ಹಾಗೂ ಕಾಲೇಜಿನ ಸಂಸ್ಥಾಪಕರಾದ ಟಿ.ಎಂ. ವಿಜಯಕುಮಾರ್ ಅವರು ಮಾತನಾಡಿ, ಹೊಸಪೇಟೆ ಭಾಗದಲ್ಲಿ ಗುಣಾತ್ಮಕ ಹಾಗೂ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಪಿಯು ಕಾಲೇಜನ್ನು ಆರಂಭಿಸಲಾಗಿದೆ. ಎಲ್ಲ ಸಿಬ್ಬಂದಿಗಳ ಕಠಿಣ ಪರಿಶ್ರಮದಿಂದ ಮೂರೇ ವರ್ಷಗಳಲ್ಲಿ ವಿಶೇಷ ಸಾಧನೆ ಮಾಡಲು ಸಾಧ್ಯವಾಗಿದೆ. ನೀಟ್, ಜೆಇಇ, ಕೆ ಸಿ ಟಿ, ಸಿಎ, ಸಿ ಎಸ್, ಸಿಎಂಎ ಗಳಂಥ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸೂಕ್ತ ತರಬೇತಿಯನ್ನು ನೀಡಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಕಾಲೇಜು ಶ್ರಮಿಸುತ್ತಿದೆ ಎಂದು ತಿಳಿಸಿದರು.

ಕಾಲೇಜಿನ ಅಧ್ಯಕ್ಷರಾದ ಎಂ. ಕೆ. ರವೀಂದ್ರ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸ್ಪಷ್ಟ ಗುರಿಯೊಂದಿಗೆ ಮುನ್ನಡೆಯಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ. ವಿ. ಎಸ್. ದಯಾನಂದ್ ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ 2022–23 ಸಾಲಿನ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಹಾಗೂ 2024 ನೇ ಸಾಲಿನ ಜೆಇಇ, ಸಿಎ, ಸಿ ಎಸ್, ಸಿಎಂಎ ಪರೀಕ್ಷೆಗಳಲ್ಲಿ ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ರೋಜ್ ಬಡ್ ಶಾಲೆಯ ನಿರ್ದೇಶಕಿ ಶ್ರೀಮತಿ ಟಿ ಎಂ ಉಷಾ ದೇವಿ ಅವರು ಉಪಸ್ಥಿತರಿದ್ದರು. ಸಾಧಕ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಅನಿಸಿಕೆ ಹಂಚಿಕೊಂಡರು.

ಉಪನ್ಯಾಸಕರಾದ ವರುಣ್, ಸಿಂಧೂ ನಿರ್ವಹಿಸಿದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಸಂಗಮೇಶ್ ಗಣಿ ಮತ್ತು ಇಂಗ್ಲೀಷ್ ವಿಭಾಗದ ಉಪನ್ಯಾಸಕಿ ಜ್ಯೋತಿ ಎಂ ನಿರೂಪಿಸಿದರು. ಜೀವಶಾಸ್ತ್ರ ಉಪನ್ಯಾಸಕಿ ಸೌಮ್ಯ ಸೂರಿಮಠ ವಂದಿಸಿದರು.

## ಹುಲಿಗಿ ಮೇಲ್ಸೇತುವೆ ನಿರ್ಮಾಣಕ್ಕೆ ಪ್ರಧಾನಮಂತ್ರಿಗಳಿಂದ ಶಂಕುಸ್ಥಾಪನೆ



**ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಸುಕ್ಷೇತ್ರದ ವ್ಯಾಪ್ತಿಯಲ್ಲಿನ ಲೆವೆಲ್ ಕ್ರಾಸಿಂಗ್ ಗೇಟ್ ಸಂಖ್ಯೆ 79ರ ಬದಲಿಗೆ ರಸ್ತೆ ಮೇಲ್ಸೇತುವೆ ನಿರ್ಮಾಣಕ್ಕೆ ಭೂಮಿ ಪೂಜೆ ಹಾಗೂ ಅಮೃತ ಭಾರತ ಸ್ಟೇಷನ್ ಯೋಜನೆಯಡಿ ಮುನಿರಾಬಾದ್ ರೈಲು ನಿಲ್ದಾಣದ ಪುನರಾಭಿವೃದ್ಧಿಗೆ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜಿ ಅವರು ವರ್ಚುವಲ್ ಮೂಲಕ ಫೆಬ್ರವರಿ 26ರಂದು ಶಂಕುಸ್ಥಾಪನೆ ನೆರವೇರಿಸಿದರು.

ಮುನಿರಾಬಾದ್ ರೈಲು ನಿಲ್ದಾಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭವನ್ನು ಕೊಪ್ಪಳ ಸಂಸದರಾದ ಕರಡಿ ಸಂಗಣ್ಣ ಅವರು ಉದ್ಘಾಟಿಸಿ ಮಾತನಾಡಿ, ದೇಶದಲ್ಲಿಂದು ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಅಮೃತ ಭಾರತ ಸ್ಟೇಷನ್ ಯೋಜನೆಯಡಿ 554 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಶಂಕುಸ್ಥಾಪನೆ, ಉದ್ಘಾಟನೆ ಜೊತೆಗೆ 1500 ರೈಲ್ವೆ ಬ್ರಿಡ್ಜ್ ನಿರ್ಮಾಣಕ್ಕೆ ಭೂಮಿ ಪೂಜೆ ಮತ್ತು ಲೋಕಾಪಣೆ ನಡೆದಿದೆ. ಪಿಎಂ ನರೇಂದ್ರ ಮೋದಿಜಿಯವರ ನೇತೃತ್ವದ ಕೇಂದ್ರ ಸರ್ಕಾರವು ರೈಲ್ವೆ, ವಾಯು ವಲಯ, ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಜಲ ಮಾರ್ಗಗಳ ಅಭಿವೃದ್ಧಿಗಾಗಿ ಹೆಚ್ಚು ಒತ್ತು ನೀಡಿದೆ ಎಂದು ಹೇಳಿದರು.

ಮುನಿರಾಬಾದ್ ರೈಲೆ ನಿಲ್ದಾಣದ ಉನ್ನತಾಭಿವೃದ್ಧಿಗೆ ಕ್ರಮ: ಕೊಪ್ಪಳ ಜಿಲ್ಲೆಯ ಶ್ರೀಕ್ಷೇತ್ರ ಹುಲಿಗಿಗೆ ಪ್ರತಿ ದಿನ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಇಲ್ಲಿಗೆ ಬರುವ ಜನರಿಗೆ ಸುಗಮ ಸಂಚಾರಕ್ಕಾಗಿ ರೈಲ್ವೆ ಮೇಲ್ಸೇತುವೆ ಅತ್ಯಗತ್ಯವಾಗಿತ್ತು. ಈ ನಿಟ್ಟಿನಲ್ಲಿ ಇಂದು ಹುಲಿಗಿ ರೈಲ್ವೆ ಮೇಲ್ಸೇತುವೆಗಾಗಿ ಶಂಕುಸ್ಥಾಪನೆ ನೆರವೇರಿಸಲಾಗಿದೆ. ವಿಶೇಷ ದಿನಗಳಂದು ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಂದ ಭಕ್ತಾಧಿಕಗಳು ಹುಲಿಗಿಗೆ ಆಗಮಿಸುತ್ತಾರೆ. ಮೊನ್ನೆಯ ಹುಣ್ಣಿಮೆಯ ದಿನದಂದು ಸುಮಾರು 4ಲಕ್ಷ ಜನರು ಭಾಗವಹಿಸಿದ್ದರು ಎನ್ನಲಾಗುತ್ತಿದೆ. ಪ್ರಸ್ತುತ ಅಮೃತ ಭಾರತ ಸ್ಟೇಷನ್ ಯೋಜನೆಯಡಿ ಸುಮಾರು ರೂ. 21 ಕೋಟಿ ವೆಚ್ಚದಲ್ಲಿ ಮುನಿರಾಬಾದ್ ರೈಲು ನಿಲ್ದಾಣದ ಪುನರಾಭಿವೃದ್ಧಿಯಾಗಲಿದ್ದು, ಮುಂದಿನ ದಿನಮಾನಗಳಲ್ಲಿ ನಂ–3ರಲ್ಲಿ ಮುನಿರಾಬಾದ್ ರೈಲೆ ನಿಲ್ದಾಣದ ಉನ್ನತಾಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹುಲಿಗಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ನೀಲಮ್ಮ ಸಿದ್ದಪ್ಪ, ಉಪಾಧ್ಯಕ್ಷರಾದ ನ್ಯಾಮತ್ ಅಲಿ, ಶ್ರೀ ಹುಲಿಗೆಮ್ಮ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ವಿರೇಶ, ಗಣ್ಯರಾದ ಗೋಪಾಲ, ನಾಗರತ್ನ ಪೂಜಾರ, ಪ್ರಭು ಪಾಟೀಲ್, ನವೀನ ಗುಳಕಣ್ಣವರ ಹಾಗೂ ಹಲವರು, ರೈಲ್ವೆ ಇಲಾಖೆ ಅಧಿಕಾರಿಗಳಾದ ವಿಜಯಕುಮಾರ ಮತ್ತಿತರರು ಉಪಸ್ಥಿತರಿದ್ದರು




# ಹುಲಿಗೆಮ್ಮ ದೇವಿ ರೈಲ್ವೆ ನಿಲ್ದಾಣವೆಂದು ನಾಮಕರಣಕ್ಕೆ ಒತ್ತಾಯ

**ಹಂಪಿ ಟೈಮ್ಸ್ ಹೊಸಪೇಟೆ**

ನೈರುತ್ಯ ರೈಲ್ವೆ ವಲಯದ ವ್ಯಾಪ್ತಿಯಲ್ಲಿರುವ ಮುನಿರಾಬಾದ್ ರೈಲ್ವೆ ನಿಲ್ದಾಣಕ್ಕೆ ಶ್ರೀ ಹುಲಿಗೆಮ್ಮದೇವಿ ರೈಲ್ವೆ ನಿಲ್ದಾಣ ಎಂದು ಮರುನಾಮಕರಣ ಮಾಡಬೇಕೆಂದು ಆಗ್ರಹಿಸಿ ಸೋಮವಾರ ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಕೊಪ್ಪಳ ಲೋಕಸಭಾ ಸದಸ್ಯ ಸಂಗಣ್ಣ ಕರಡಿ ಅವರಿಗೆ ಮನವಿ ಸಲ್ಲಿಸಿದರು.

ಅಮೃತ್‌ಭಾರತ್ ರೈಲ್ವೆ ನಿಲ್ದಾಣ ಯೋಜನೆ ಅಡಿಯಲ್ಲಿ ಮುನಿರಾಬಾದ್ ರೈಲ್ವೆ ನಿಲ್ದಾಣವು ಸಹ ಸೇರಿಸಲಾಗಿದ್ದು ಅದರ ನವೀಕರಣ ಹಾಗೂ ಇಲ್ಲಿಯ ರೈಲ್ವೆ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವ ಎಲ್.ಸಿ.ಗೇಟ್ ನಂ:79, ರೈಲ್ವೆ ಮೇಲ್‌ಸೇತುವೆ ನಿರ್ಮಾಣಕ್ಕಾಗಿ ಶಂಕುಸ್ಥಾಪನೆಗಾಗಿ ಮುನಿರಾಬಾದ್ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ ಸಂದರ್ಭದಲ್ಲಿ ಮನವಿ ಸಲ್ಲಿಸಿ ಒತ್ತಾಯಿಸಿದರು.

ಹುಲಿಗೆಮ್ಮ ದೇವಿ ದೇವಸ್ಥಾನವು ಉತ್ತರ ಕರ್ನಾಟಕದ ಪ್ರಸಿದ್ಧ ಧಾರ್ಮಿಕ – ಯಾತ್ರಾ ಕೇಂದ್ರವಾಗಿದೆ. ತುಂಗಭದ್ರ ನದಿಯ ದಂಡೆಯ ಮೇಲೆ ಪ್ರತಿಷ್ಠಾಪನೆಯಾಗಿರುವ ದೇವಸ್ಥಾನವು ಅತ್ಯಂತ ಪ್ರಾಚೀನ ಶಕ್ತಿಕೇಂದ್ರವಾಗಿದ್ದು, ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಲಕ್ಷಾಂತರ ಭಕ್ತರನ್ನು ಹೊಂದಿದೆ. ಈ ಭಾಗದಲ್ಲಿ ಆರ್ಥಿಕ ವಾಣಿಜ್ಯ ಚಟುವಟಿಕೆಗಳು ಬೆಳವಣಿಗೆಯಾಗುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಅಧಿಕ ಆಧಾಯ ತಂದುಕೊಡುವಲ್ಲಿ ಹುಲಿಗೆಮ್ಮ ದೇವಸ್ಥಾನ ಅಪಾರ ಕೊಡುಗೆ ನೀಡುತ್ತದೆ. ಈ ಗ್ರಾಮದ ಆಡಳಿತ ವ್ಯವಸ್ಥೆ ಹುಲಿಗಿ ಎಂಬ ಹೆಸರಿನಲ್ಲೆ ನಡೆಯುತ್ತಿದ್ದು, ಇಲ್ಲಿರುವ ರೈಲ್ವೆ ನಿಲ್ದಾಣ ಪ್ರದೇಶವು ಸಹ ಹುಲಿಗಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿದೆ. ಇಷ್ಟೆಲ್ಲಾ ಚಾರಿತ್ರಿಕ ಭೌಗೋಳಿಕ ಆಡಳಿತಾತ್ಮಕ ವಾಸ್ತವಾಂಶಗಳಿರುವಾಗ ರೈಲ್ವೆ ನಿಲ್ದಾಣಕ್ಕೆ ಮಾತ್ರ ಮುನಿರಾಬಾದ್ ಎಂಬ ಹೆಸರಿನಿಂದ ಕರೆಯುವುದು ಸೂಕ್ತವಲ್ಲ. ದೇಶದಲ್ಲಿ ಅನೇಕ ನಗರ ಗ್ರಾಮಗಳ ಹೆಸರನ್ನು ಆ ಪ್ರದೇಶದ ಚಾರಿತ್ರಿಕ ಭೌಗೋಳಿಕಹಿನ್ನಲೆಗಳನ್ನುಮಾನದಂಡವಾಗಿಟ್ಟುಕೊಂಡು ನಿರ್ಧರಿಸಲಾಗುತ್ತದೆ. ಮುನಿರಾಬಾದ್ ಎಂಬ ಹೆಸರನ್ನು ಬದಲಿಸಿ ಹುಲಿಗೆಮ್ಮ ದೇವಿ ಎಂದು ಮರುನಾಮಕರಣ ಮಾಡಲು ಆಗ್ರಹಿಸಿದರು.



ಹುಲಿಗಿ (ಹಿಟ್ನಾಳ್) ಬೂದುಗುಂಪಾ ನಡುವೆ ನೂತನವಾಗಿ ಬೈಪಾಸ್ ರೈಲ್ವೆ ಮಾರ್ಗ ನಿರ್ಮಾಣ ಮತ್ತು ಗಂಗಾವತಿ–ಸಿಂಧನೂರು ತಾಲೂಕುಗಳಿಂದ ಹೊಸಪೇಟೆ–ದಾವಣಗೆರೆ–ಬೆಂಗಳೂರು ಮತ್ತು ಕರಾವಳಿ ಜಿಲ್ಲೆಗಳಿಗೆ ತ್ವರಿತವಾಗಿ ಸಂಪರ್ಕ ಕಲ್ಪಿಸಲು ಬೈಪಾಸ್ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು. ಈ ಬೈಪಾಸ್ ಮಾರ್ಗ ನಿರ್ಮಾಣದಿಂದ ಗಿಣಿಗೇರಾದಲ್ಲಿ ರೈಲು ಇಂಜಿನ್ ರಿವರ್ಸ್ ಮಾಡುವ ತೊಂದರೆ ತಪ್ಪಿದಂತಾಗುತ್ತದೆ ಹಾಗೂ ಬೂದುಗುಂಪಾದಿಂದ ನೇರ ಸಂಪರ್ಕ ದೊರೆತು ಸುಗಮ ಸಂಚಾರಕ್ಕೆ ಅವಕಾಶ ದೊರಕಿ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವೈ.ಯಮುನೇಶ್, ಮಹೇಶ್ ಕುಡತಿನಿ, ಉಮಾಮಹೇಶ್ವರ್, ಕೌತಾಳ್ ವಿಶ್ವನಾಥ ಹಾಗೂ ಇತರೆ ಪದಾಧಿಕಾರಿಗಳು ಭಾಗವಹಿಸಿ ಮನವಿ ಸಲ್ಲಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA